ಸ್ಥಗಿತ ಮಾಡಿದ್ದೇವೆ. ಆದು ಕೇವಲ ತುಮಕೂರು ಜಿಲ್ಲೆ ಅಲ್ಲ, ಹಾಸನ ಜಿಲ್ಲೆ ಅಲ್ಲ, ಮೈಸೂರು ಜಿಲ್ಲೆ ಅಲ್ಲ, ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳಲ್ಲಿ ಕೆಲವು ನಿಯಮಗಳ ವ್ಯಾಪ್ತಿಯಲ್ಲಿ ಆ ಕಾಮಗಾರಿಗಳನ್ನು ತರಬೇಕೆಂದು ಕೆಲಸ ಸ್ಥಗಿತ ಮಾಡಿ ಇಲಾಖಾ ಮುಖ್ಯಸ್ಥರುಗಳಿಗೆ ಸೂಚನೆ ಕೊಟ್ಟಿದ್ದೇನೆ. ಕಾನೂನು ಚೌಕಟ್ಟಿನ ವ್ಯಾಪ್ತಿಯಲ್ಲಿ ಈ ಕೆಲಸ ಮಾಡಲಿಕ್ಕೆ ಕೆಲವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ. ಅಂದರೆ ಈ ಕೆಲಸ ನಿಲ್ಲಿಸುತ್ತೇವೆ ಎಂದು ಅಲ್ಲ. ಇದರ ಬಗ್ಗೆ ಇವತ್ತು ಸುದೀರ್ಘವಾದ ಉತ್ತರ ಕೊಡುವುದಕ್ಕೆ ಸಾಧ್ಯ ಆಗುವುದಿಲ್ಲ. ರಾಜ್ಯಪಾಲರ ಭಾಷಣದ ಮೇಲೆ ಸಾಕಷ್ಟು ಅವಕಾಶ ಇದೆ. ಎಲ್ಲಾ ವಿವರಗಳನ್ನು ಸಭೆಯ ಮುಂದೆ ಇಡುತ್ತೇನೆ. ಅವತ್ತು ಈ ಸರ್ಕಾರದ ಮುಂದೆ ಯಾವ ರೀತಿ ಆ ಕಾರ್ಯಕ್ರಮಗಳನ್ನು ನಡೆಸತಕ್ಕಂಥದಕ್ಕೆ ನಾವು ನಿರ್ಣಯಗಳನ್ನು ಮಾಡುತ್ತೇವೆ ಎನ್ನುವುದನ್ನು ಸಭೆಯ ಮುಂದಿಡುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ. ಶ್ರೀನಿವಾಸ್:- ಸನ್ಮಾನ್ಯ ಸಭಾಧ್ಯಕ್ಷರೇ, ಸುಮಾರು.....
ಶ್ರೀ ಬಿ. ಶಿವರಾಮು:- ಅಧ್ಯಕ್ಷರೇ,.....

ಅಧ್ಯಕ್ಷರು:- ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರಲ್ಲಾ ಸವಿಸ್ತಾರವಾಗಿ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ:- ಈಗ ಏನಾಗಿದೆ ಇಡೀ ಜಿಲ್ಲೆಯಲ್ಲಿ ಕೆಲಸ ಅನುಷ್ಠಾನ ಆಗುವುದೇ ಇಲ್ಲ ಎನ್ನುವ ಭಾವನೆ ಬಂದಿದೆ. ಆದರಿಂದ ದಯಮಾಡಿ ಸರ್ಕಾರದವರ ಸ್ಪಷ್ಟ ನಿಲುವನ್ನು ಹೇಳಬೇಕು. ಕೆಲಸ ಮಾಡುತ್ತೇನೆ ಅಥವಾ ಇಲ್ಲ ಎನ್ನುವ ಬಗ್ಗೆ ಸ್ಪಷ್ಟವಾದ ನಿಲುವನ್ನು ತಾವು ದಯಮಾಡಿ ಸರ್ಕಾರದಿಂದ ಕೊಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ವಿಷಯ :- ಬೆಂಗಳೂರಿನ ಕೋರಮಂಗಲದಲ್ಲಿ ಬೆಂಕಿ ಅನಾಹುತದಿಂದ ಗುಡಿಸಲುಗಳ
ಭಸ್ಮ. -------

ಶ್ರೀ ಎಂ. ಶ್ರೀನಿವಾಸ್(ಉತ್ತರಹಳ್ಳಿ):- ಸನ್ಮಾನ್ಯ ಸಭಾಧ್ಯಕ್ಷರೇ, ಮೊನ್ನೆ 23ನೇ ತಾರೀಖು ಸುಮಾರು ರಾತ್ರಿ 8.30 ಗಂಟೆಗೆ ನಮ್ಮ ಕೋರಮಂಗಲದ ಕೊಳಚೆ ಪ್ರದೇಶದಲ್ಲಿ 2 ಕಡೆ ಗುಂಪುಗಳು ಬಂದು ಬೆಂಕಿಯನ್ನು ಹಾಕಿ ಸುಮಾರು 400 ಗುಡಿಸಲುಗಳು ಸುಟ್ಟು ಹೋಗಿವೆ. ಅವತ್ತಿನ ದಿವಸ ಬೆಳಿಗ್ಗೇ ಕಾರ್ಪೊರೇಷನ್ ಕಮಿಷನರ್ ರವರಿಗೆ ಫೋನ್ ಮಾಡಿದ್ದೆ, ಸನ್ಮಾನ್ಯ ಮಂತ್ರಿಯವರಿಗೆ ಫೋನ್ ಮಾಡಿ ಅವರು ಬೀದಿಪಾಲಾಗಿದ್ದಾರೆ ಎಂದು ತಿಳಿಸಿದ್ದೆ. ಅವತ್ತು ರಾತ್ರಿ ಎಲ್ಲಾ ಆರಿಸಿ ಆಯಿತು. ಆದರೆ ಬೆಳಿಗ್ಗೆ ನಾನು ಅಲ್ಲಿಗೆ ಹೋಗಿದ್ದೆ. ಹೋದಾಗ ಸುಮಾರು ಜನಗಳು ಆ ಭಾಗದ ಜನಗಳೆಲ್ಲಾ ಬೀದಿಪಾಲಾಗಿ ನಿಂತಿದ್ದರು. ಅವರಿಗೆ ಊಟ ಇಲ್ಲ. ತಟ್ಟೆ ಇಲ್ಲ. ಏನೂ ಇಲ್ಲ. ಅವರನ್ನು ಯಾರೂ ವಿಚಾರಿಸುವವರೇ ಇಲ್ಲ. ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೆ. ಮಂತ್ರಿಗಳಿಗೂ ಹೇಳಿದ್ದೆ. ಆಮೇಲೆ ಗೃಹ

ಮಂತ್ರಿಗಳು ಬಂದರು, ಅವರಿಗೂ ಸಹ ತೋರಿಸಿದೆ. ಅವರು ಹೇಳಿದರು ಪ್ರಯತ್ನ ಮಾಡೋಣ ಎಂದು ಹೇಳಿದರು.

ಆದು ಆದಮೇಲೆ ಮಾರನೆಯ ದಿವಸ ಆ ಭಾಗದ ಬಡವರಿಗೆ ಅವರು ಹೊದ್ದುಕೊಳ್ಳುವುದಕ್ಕೆ ಹಾಕಿಕೊಳ್ಳುವುದಕ್ಕೆ ಯಾವುದೇ ರೀತಿಯ ಬಟ್ಟೆಗಳು ಇಲ್ಲ. ಎಲ್ಲಾ ಸುಟ್ಟು ಹೋಗಿವೆ. ಅಷ್ಟೋ ಇಷ್ಟೋ ಕೂಲಿ ಮಾಡಿ ಇಟ್ಟುಕೊಂಡಿದ್ದ ಹಣ ಅದೂ ಕೂಡ ಸುಟ್ಟು ಹೋಗಿದೆ. ಅರ್ಧಂಬರ್ಧ ಸುಟ್ಟಿರುವುದನ್ನು ಗೃಹ ಮಂತ್ರಿಗಳಿಗೆ ತೋರಿಸಿದೆ. ಇವತ್ತಿಗೂ ಸರ್ಕಾರ ಅವರಿಗೆ ಮನೆ ಕಟ್ಟಿಕೊಡುವುದಕ್ಕೆ ಚಿಂತೆ ಮಾಡಿಲ್ಲ. ಅದು ಆದಮೇಲೆ ಮಾರನೆಯ ದಿವಸ ಸಂಜೆ ಮುಖ್ಯ ಮಂತ್ರಿಗಳು, ನಗರಾಭಿವದ್ಧಿ ಸಚಿವರು ಮತ್ತು ಗೃಹ ಸಚಿವರು ಮೂರು ಜನ ಅಲ್ಲಿ ಹೋಗುವುದಕ್ಕೆ ಅರ್ಧ ಗಂಟೆ ಮುಂಚೆ ಅವರು ಬರುತ್ತಾರೆಂದು ತಿಳಿದು ಮತ್ತೆ 5 ಗುಡಿಸಲುಗಳಿಗೆ ಬೆಂಕಿ ಹಾಕಿದ್ದಾರೆ, ಮತ್ತೆ ಮುಖ್ಯ ಮಂತ್ರಿಗಳು ಎಲ್ಲಾ ನೋಡಿಕೊಂಡು ಬಂದಮೇಲೆ 7.30ಕ್ಕೆ ಮತ್ತೆ ನಾಲ್ಕು ಗುಡಿಸಲುಗಳಿಗೆ ಬೆಂಕಿ ಹಾಕಿದ್ದಾರೆ. ಈಕಡೆ ಪೋಲೀಸ್ ಇದೆ ಆ ಕಡೆ ರಿಸರ್ವ್ ಇದೆ. ಈ ರೀತಿ ಗುಡಿಸಲುಗಳಿಗೆ ಬೆಂಕಿ ಹಾಕಿ 400 ಜನ ಗುಡಿಸಲು ವಾಸಿಗಳು ಬೀದಿಪಾಲಾಗಿದ್ದಾರೆ. ಮತ್ತೆ ಮತ್ತೆ ಗುಡಿಸಲುಗಳಿಗೆ ಬೆಂಕಿ ಹಾಕುವುದು ಶುರುವಾಗಿದೆ. ಸರ್ಕಾರ ನಿಮ್ಮ ಕೈಯಲ್ಲಿದೆ. ಈ ಕಡೇ ಆ ಕಡೆ ಗುಂಪಿನವರು ಯಾರು ಬೆಂಕಿ ಹಾಕಿದರು ಅವರನ್ನು ಹಿಡಿದು ಬಂದೋಬಸ್ತ್ ಮಾಡುವುದು ನಿಮ್ಮ ಕೈಯಲ್ಲಿದೆ. ಕರ್ನಾಟಕ ಜನತೆ ನಿಮ್ಮ ಕೆಯಲ್ಲಿ ಸರ್ಕಾರವನ್ನು ಕೊಟ್ಟಿದೆ. ಇವತ್ತಿಗೆ ಮೂರು ದಿನವಾಯಿತು. ನಾನು ಕಮಿಷನರ್‌ಗೆ ಹೇಳಿದೆ ಅಲ್ಲಿ ಒಂದು ಶಾಮಿಯಾನ ಹಾಕಿ ಎಂದು, ಆಮೇಲೆ ಶಾಮಿಯಾನ ಬಂತು. ಸರ್ಕಾರದವರು ಬಂದೆರಡು ಬಿಟ್ಟುಕೊಡಲಿಲ್ಲ. ಬೇರೆ ಖಾಸಗಿಯವರು ಸಹಾಯ ಮಾಡಿದರು. ಇವ್ತೊತ್ತು ಸರ್ಕಾರ ನೇರವಾಗಿ ಹೇಳಬೇಕು, ಆ ಬಡವರಿಗೆ ಯಾವಾಗ ಮನೆಗಳನ್ನು ಕಟ್ಟಿಕೊಡುತ್ತೀರಿ. ಅವರಿಗೆ ಒಂದು ಮನೆಗೆ ಎಷ್ಟು ವೆಚ್ಚವಾಗುತ್ತದೆಂದು ಎಸ್ಟಿಮೇಟ್ ಮಾಡಿದ್ದೀರಾ? ಅವರಿಗೆ ಎಷ್ಟು ದಿನಗಳಲ್ಲಿ ಮನೆಗಳನ್ನು ಕಟ್ಟಿಕೊಡುತ್ತೀರಿ ಎಂಬುದನ್ನು ಸರ್ಕಾರದವರು ಸ್ಪಷ್ಟವಾಗಿ ಹೇಳಬೇಕು. ಇವ್ತೊತ್ತು ಬೆಳಿಗ್ಗೆ ನಾನು ವಿಧಾನಸಭೆಗೆ ಬರುವುದಕ್ಕೆ ಮೊದಲು ಸ್ಲಮ್‌ನ ಕೆಲವರು ಬಂದರು. ರಾಷ್ಟ್ರೀಯ ಕ್ರೀಡಾ ಸಮುಚ್ಚಯದ ಹಿಂದುಗಡೆ ಮನೆಗಳನ್ನು ಕಟ್ಟುತ್ತಿದ್ದಾರೆ. ಅದರ ಪಕ್ಕದಲ್ಲಿ 394 ಗುಡಿಸಲುಗಳಿವೆ. ಅವರೆಲ್ಲಾ ಬಂದಿದ್ದರು. ನಮಗೆ ಗೂಂಡಾಗಳು ರಾತ್ರಿಯೆಲ್ಲಾ ಹೆದರಿಸುತ್ತಿದ್ದಾರೆ. ನಿಮಗೆ ಹಗಲೇ ಬೆಂಕಿ ಹಾಕುತ್ತೇವೆ ಎಂಬ ಮಟ್ಟಕ್ಕೆ ಅವರು ಬಂದರು. ಅವರು ಹೇಳಿದ್ದನ್ನು ನಂಬಲೇಬೇಕು. ಮಂತ್ರಿಗಳು ಅಲ್ಲಿಗೆ ಹೋಗುತ್ತಾರೆ. ಅವರು ಹೋಗಿ ಬಂದ ಮೇಲೆ ಅಲ್ಲಿ ಬೆಂಕಿ ಹಾಕುತ್ತಾರೆ ಅಂದರೆ ಅಲ್ಲಿರತಕ್ಕ ಜನರಿಗೆ ಭಯ ಭೀತಿ ಬಂದೇ ಬರುತ್ತದೆ. ಆ ಬಡ ಜನರು ಇರತಕ್ಕಂಥ ಗುಡಿಸಲುಗಳಿಗೆ ಬೆಂಕಿ ಹಾಕುತ್ತಾರೆ ಅಂದರೆ ಅಲ್ಲಿ ಒಂದು ಗುಂಪು ಸೇರಿದೆ ಎಂದು ಆ ಜನರು ಭಯಭೀತರಾಗಿದ್ದಾರೆ. ನಾನು ಗೃಹ ಮಂತ್ರಿಗಳಿಗೆ ಅಲ್ಲೇ ಹೇಳಿದೆ. ಇದರಲ್ಲಿ ಯಾವುದೇ ರಾಜಕೀಯ ಬೇಡ. ಯಾರು ತಪ್ಪಿತಸ್ಥರಿದ್ದಾರೆ ಅವರನ್ನು ತಾವು ಶಿಕ್ಷೆ ಮಾಡಿ ಆಗ ಎಲ್ಲಾ ಸರಿ ಹೋಗುತ್ತದೆ. ಹಿಂದೆ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಸದನ ನಡೆಯುತ್ತಿತ್ತು. ಅವತ್ತು ಇದೇ ರೀತ ಅಲ್ಲಿ ಬೆಂಕಿ ಬಿತ್ತು. ಬೆಂಕಿ ಬಿದ್ದಾಗ ಹೆಣ್ಣು ಮಗಳೊಬ್ಬಳು ಅಲ್ಲಿ ಸತ್ತು ಹೋದಳು. ನಾವೆಲ್ಲಾ

ಅಲ್ಲಿ ಹೋಗಿದ್ದೆವು. ಆಗ ರಾಚಯ್ಯನವರು ಹೋಂ ಮಿನಿಸ್ಟರ್ ಆಗಿದ್ದರು. ಹೆಗಡೆಯವರೂ ಇದ್ದರು. ಆ ಭಾಗದ ಶಾಸಕರನ್ನು ಕರೆದುಕೊಂಡು ಹೋಗುತ್ತಿದ್ದರು. ಇವತ್ತಿನ ಮುಖ್ಯ ಮಂತ್ರಿಗಳು ಆಗಲೀ, ಯಾವ ಮಂತ್ರಿಗಳು ಆಗಲೀ ಆ ಭಾಗದ ಶಾಸಕರನ್ನು ಕರೆಯುವುದಿಲ್ಲ. ಕರೆಯದಿದ್ದರೂ ಪರವಾಗಿಲ್ಲ. ಅವರೇ ಹೋಗಲಿ, ಚಿಂತೆ ಇಲ್ಲ. ಉತ್ತರಹಳ್ಳಿ ಕ್ಷೇತ್ರದ ಜನತೆಗೆ ಗೊತ್ತಾಗುತ್ತದೆ. ಶಾಸಕರ ಬಗ್ಗೆ ಎಷ್ಟು ವಿಶ್ವಾಸ ಇದೆ ಎಂಬುದು ಅವರಿಗೆ ಮನವರಿಕೆ ಆಗುತ್ತದೆ. ಅವರು ಮೊನ್ನೆ ತಾನೇ ನಮಗೆ ಮತ ಕೊಟ್ಟು ಕಳುಹಿಸಿದ್ದಾರೆ. ಮಂತ್ರಿಗಳು ಕರೆಯದಿದ್ದರೂ ಪರವಾಗಿಲ್ಲ; ಇವತ್ತು ನಮಗೆ ಅದಲ್ಲ ಪ್ರಶ್ನೆ. ಈ ಒಂದು ಘಟನೆ ನಡೆದು 3 ದಿನವಾಗಿದೆ, ಅಲ್ಲಿ ಒಂದೆರಡು ಜೊತೆ ಬಟ್ಟೆ ಕೂಡ ಕೊಡಲಿಲ್ಲ. ಈ ಸದನದಿಂದ ಯಾರನ್ನು ಬೇಕಾದರೂ ಕಳುಹಿಸಿ ನೋಡಿ. ಯಾವ ರೀತಿ ಅವರು ಅಲ್ಲಿ ಅಲೆಯುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಫೋಟೋ ಕೂಡ ಬಂದಿದೆ. ಅಲ್ಲಿ ಯಾವುದೇ ವ್ಯವಸ್ಥೆ ಆಗಿಲ್ಲ. ಅದಕ್ಕೋಸ್ಕರ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಸದನದ ಮೂಲಕ ಕೇಳತಕ್ಕದ್ದು ಇವತ್ತು ಎಷ್ಟು ದಿನಗಳಲ್ಲಿ ಅವರೆಲ್ಲರಿಗೆ ಮನೆ ಕಟ್ಟಿಸಿ ಕೊಡುತ್ತೀರಿ? ಮುಂದೆ ಅಲ್ಲಿರತಕ್ಕ ಬಡವರಿಗೆ ಯಾವ ರೀತ ರಕ್ಷಣೆ ಕೊಡುತ್ತೀರಿ? ನಮ್ಮ ಉದ್ದೇಶ ಏನೆಂದರೆ ರಾಷ್ಟ್ರೀಯ ಕ್ರೀಡಾ ರಂಗಳ ಬಳಿ ಏನು ಮನೆಗಳನ್ನು ಕಟ್ಟುತ್ತಿದ್ದಾರೆ ಅದರ ನಕ್ಷೆಯನ್ನು ಕೊಡಿ ಎಂದು ಕೇಳಿದೆವು. ಅಲ್ಲಿ ಅಪ್ರೋಚ್ ರೋಡ್ ಎಲ್ಲಿದೆ ಆ ರಸ್ತೆಯ ನಕ್ಷೆ ಕೊಡಿ ಎಂದರೆ ಕೊಡಲಿಲ್ಲ. ಇವತ್ತು ಅನ್ನಿಸುತ್ತದೆ, ಇದು ಒಂದೇ ಸಾರಿ ಬೆಂಕಿ ಹಾಕಿರತಕ್ಕದ್ದು ಅಲ್ಲ. 3 ದಿನಗಳಲ್ಲಿ ಇಲ್ಲಿ ಬೆಂಕಿ ಹಚ್ಚಿಸಿದ್ದಾರೆ. ಅಲ್ಲಿ 367 ಕೋಟಿ ರೂಪಾಯಿಗಳ ಕಾಂಟ್ರಾಕ್ಟ್ ನಡೆಯುತ್ತಿದೆ. ಅವರಿಗೆ ಅಲ್ಲಿ ರಸ್ತೆ ಇಲ್ಲ. ಈ ಬಡವರನ್ನು ಅಲ್ಲಿಂದ ಖಾಲಿ ಮಾಡಿಲಸುವುದಕ್ಕಾಗುವುದಿಲ್ಲ. ಈ ರೀತಿ ಬೆಂಕಿ ಹಾಕಿಸಿದರೆ ಖಾಲಿ ಮಾಡಬಹುದೆಂದು ಭಾವಿಸಿದ್ದಾರೆ ಎಂಬುದು ಎದ್ದು ಕಾಣುತ್ತದೆ. ಏಕೆಂದರೆ ಇದು ಒಂದೇ ಸಾರಿ ಬೆಂಕಿ ಬಿದ್ದುದ್ದು ಅಲ್ಲ. 3 ದಿನಗಳಲ್ಲಿ 3 ಸಾರಿ ಬೆಂಕಿ ಬಿದ್ದಿದೆ. ಅಂಥದ್ದರಲ್ಲಿ ಇವತ್ತು ಸಭಾಧ್ಯಕ್ಷರೇ, ಸರ್ಕಾರ ಇಷ್ಟು ದಿನಗಳಲ್ಲಿ ಮನೆ ಕಟ್ಟಿಸಿಕೊಡುತ್ತೀರೋ ಮತ್ತು ಅವರನ್ನು ಅಲ್ಲಿ ಖಾಯಂ ಮಾಡುತ್ತೀರೋ? ಬೇರೆ ಕಡೆ ಬೆಂಕಿ ಬೀಳುವ ಸಂಭವ ನೋಡಿದರೆ ಅಲ್ಲಿನ ಜನರು ಹೇಳುವ ಮಾತು ನಿಜ ಅನ್ನಿಸುತ್ತದೆ. ಇಲ್ಲಿ ರಸ್ತೆ ಬೇಕು, ಅದಕ್ಕೆ ಬೆಂಕಿ ಹಚ್ಚಿಸುತ್ತಾರೆ ಎಂದು ಅಲ್ಲಿನ ಜನರು ಹೇಳುತ್ತಿದ್ದಾರೆ. ನೀವು ಅಲ್ಲಿ ಹೋಗಿ ಯಾರನ್ನು ಬೇಕಾದರೂ ಕೇಳಿ, ನಾನೂ ರಾಜಕೀಯದಿಂದ ಮಾತನಾಡುತ್ತಿಲ್ಲ. ಅಲ್ಲಿ ಯಾವುದೇ ಜನರನ್ನು ಕೇಳಿದರೂ ಇದೇ ಮಾತು ಹೇಳುತ್ತಾರೆ. ಇವತ್ತು ಬೆಳಿಗ್ಗೆ ನೋಡಿದೆ, ಈಜಿಪುರದ ಪಕ್ಕದಲ್ಲಿ 300 ಗುಡಿಸಲುಗಳು ಇವೆ. ಅವರೂ ಕೂಡ ಬೆಳಿಗ್ಗೆ ನನ್ನ ಹತ್ತಿರ ಬಂದಿದ್ದರು. ನೀವು ಬರಬೇಕು, ಪೋಲೀಸ್ ರಕ್ಷಣೆ ಕೂಡ ಬೇಕು. ಇಲ್ಲದಿದ್ದರೆ ಮತ್ತೆ ಗುಡಿಸಲುಗಳಿಗೆ ಬೆಂಕಿ ಹಾಕುತ್ತಾರೆ ಎಂದು ಹೇಳಿದರು. ದಯವಿಟ್ಟು ಸರ್ಕಾರ ಅವರಿಗೆ ಎಷ್ಟು ದಿನಗಳಲ್ಲಿ ಮನೆಗಳನ್ನು ಕಟ್ಟಿಸಿ ಕೊಡುತ್ತದೆ ಎಂಬುದನ್ನು ಹೇಳಬೇಕು. ಒಂದೊಂದು ಮನೆಗೆ ಎಷ್ಟು ಹಣ ಮಂಜೂರು ಮಾಡಿ ಕೊಡುತ್ತೀರಿ ಎಂಬುದನ್ನು ಹೇಳಬೇಕು. ಏಕೆಂದರೆ ಆಶ್ವಾಸನೆ ಕೊಟ್ಟು ಅದು ಹಾಗೆಯೇ ಉಳಿಯಬಾರದು. ಅವತ್ತು

ಶ್ರೀಮಾನ್ ಹೆಗಡೆಯವರ ಸರ್ಕಾರದಲ್ಲಿ.....

(ಗೊಂದಲ)

ಒಂದಲ್ಲ ಹತ್ತು ಸಾರಿ ಹೇಳಬೇಕಾಗುತ್ತದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಗುಡಿಸಲುಗಳು ಸುಟ್ಟುಹೋದವು. ಆ ಸಂದರ್ಭದಲ್ಲಿ ಶ್ರೀ ರಾಜೀವ್ ಗಾಂಧಿಯವರು ಏಳೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟರು. ಆದರೆ ಬಡಜನರಿಗೆಂದು ಕೊಟ್ಟ ಆ ಹಣವನ್ನು ಬೇರೆಯವರು ತಿಂದು ಬಿಟ್ಟರು; ಆ ಜನರಿಗೆ ಅದನ್ನು ಕೊಡಲಿಲ್ಲ. ಆ ಬಡ ಜನರಿಗೆ ಏಳೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟು ಏಳು ವರ್ಷವಾದರೂ ಕಾರ್ಪೊರೇಷನ್‌ನವರು ಕೊಡಲಿಲ್ಲ. ಸಾಲ ತೆಗೆದುಕೊಂಡು ಅವರು ಸ್ವಲ್ಪ ಹಣ ಹಾಕಿ ಮನೆಗಳನ್ನು ಕಟ್ಟಿದ್ದಾರೆ. ಆದ್ದರಿಂದ ಇವತ್ತು ಹಾಗೆ ಆಗಬಾರದು ಎಂದು ನಾನು ಈ ಮಾತನ್ನು ನಾನು ಮತ್ತೆ ಮತ್ತೆ ಹೇಳುತ್ತಿದ್ದೇನೆ. ದಯವಿಟ್ಟು ಅವರಿಗೆ ಸೂಕ್ತ ವ್ಯವಸ್ಥೆ ಮಾಡಿಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು):- ಮನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರಾದ ಶ್ರೀನಿವಾಸ್ ಅವರು ಏನು ವಿಚಾರ ಪ್ರಸ್ತಾಪ ಮಾಡಿದ್ದಾರೆ, ಅದರಲ್ಲಿ ಅರ್ಧ ಸತ್ಯಾಂಶ ಇದೆ, ಇನ್ನರ್ಧ ಸತ್ಯಾಂಶ ಇಲ್ಲ. ಸರ್ಕಾರ ಈ ಬಗ್ಗೆ ಬಹಳ ವೇಗದಲ್ಲಿ ಕೆಲಸ ಮಾಡಿದೆ. ಮತ್ತೆ ಇದರಲ್ಲಿ ಯಾವುದೇ ರೀತಿಯ ಉದ್ದೇಶ ಗಳನ್ನು ಇಟ್ಟುಕೊಂಡು ಸರ್ಕಾರ ಕೆಲಸ ಮಾಡಿಲ್ಲ. ಸದುದ್ದೇಶವನ್ನು ಇಟ್ಟಿಕೊಂಡು ಮಾಡಿದೆ. ಅನಾಹುತ ಏನಾಗಿದೆ ಇದರ ಬಗ್ಗೆ ನಮಗೆ ತೀವ್ರವಾದ ನೋವು ಇದೆ. ಶಾಶ್ವತವಾಗಿ ಬೆಂಗಳೂರು ನಗರದಲ್ಲಿ ಈ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಎರಡು ಬಾರಿ ಎರಡು ಸಭೆಗಳನ್ನು ನಡೆಸಿದ್ದಾರೆ. ಘಟನಾವಳಿಗಳ ಬಗ್ಗೆ ಹೇಳಬೇಕೆಂದರೆ, ಅವರು ಹೇಳಿರತಕ್ಕ ವಿಚಾರಗಳನ್ನು ನಾನು ಅಲ್ಲಗಳೆದು ರಾಷ್ಟ್ರೀಯ ಕ್ರಿಡಾಕೂಟದ ಸಮುಚ್ಚಯ ಏನು ಬರುತ್ತಿದೆ ಅದಕ್ಕೂ ಇಲ್ಲ ಅಪಘಾತ ನಡೆದಿರತಕ್ಕ, ಅನಾಹುತ ನಡೆದಿರತಕ್ಕ ಸ್ಥಳಕ್ಕೂ ಒಂದೂವರೆ ಕಿಲೋಮೀಟರ್ ಡಿಸ್ಟೆನ್ಸ್ ಇದೆ. ನಾಲ್ಕೈದು ಸಾವಿರ ಮನೆಗಳು ಮಧ್ಯದಲ್ಲಿ ಬರುತ್ತವೆ. ಸ್ಪೋಟ್ಸ್ ಗೇಮ್ ಮಾಡತಕ್ಕ ಕಾಂಪ್ಲೆಕ್ಸ್‌ಗೆ....

(ಶ್ರೀ ಎಂ.ಶ್ರೀನಿವಾಸ್ ಅವರು ಮಧ್ಯ ಮಾತನಾಡಲು ಅಪೇಕ್ಷಿಸಿದರು)

ನಾನು ಅವರ ಮಾತನ್ನು ಕೇಳುವುದಕ್ಕೆ ಇಷ್ಟಪಡುವುದಿಲ್ಲ. ನಾನು ಅವರಿಗೆ ಈಲ್ಡ್ ಆಗುವುದಿಲ್ಲ.

ಶ್ರೀ ಎಂ.ಶ್ರೀನಿವಾಸ್:- ಪಾಯಿಂಟ್ ಆಫ್ ಆರ್ಡರ್.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಏನಿದೆ? ಪ್ರಶ್ನೆ

ಕೇಳಿದ್ದಾರೆ, ಉತ್ತರಿಸುತ್ತಿದ್ದೇನೆ. ನಾನು ಈಲ್ಡ್ ಆಗಿಲ್ಲ. ನ್ಯಾಷನಲ್ ಗೇಂ ನಡೆದಿರತಕ್ಕ ಜಾಗಕ್ಕೂ ಇಲ್ಲಿಗೂ ಸುಮಾರು ಒಂದು ಕಿಲೋಮೀಟರ್ ಅಂತರ ಇದೆ. ಎರಡನೆಯದಾಗಿ, ಸಾವಿರಾರು ಪಕ್ಕಾ ಮನೆಗಳು, ಕಾಂಕ್ರೀಟ್ ಮನೆಗಳು ಮಧ್ಯದಲ್ಲಿ ಇವೆ. ಮೂರನೆಯದಾಗಿ, ಎಲ್ಲಿ ಗುಡಿಸಲುಗಳು ಸುಟ್ಟು ಹೋಗಿವೆ ಅಂದರೆ ಒಂದು ದೊಡ್ಡ ಗಟ್ಟರ್ ಪಕ್ಕದಲ್ಲಿ ಹಾಕಿಕೊಂಡಿರತಕ್ಕ ಗುಡಿಸಲುಗಳು ಇವು. ಲಕ್ಷ್ಮಣರಾವ್ ನಗರ ಏನಿದೆ ಗಟ್ಟರ್ ಪಕ್ಕದಲ್ಲಿ ಕಟ್ಟಿರತಕ್ಕದ್ದು. ಅಲ್ಲಿ ಯಾವುದೇ ರಸ್ತೆ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಅವರು ಏನು ಹೇಳುತ್ತಿದ್ದಾರೆ ಯಾರಿಗೋ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಇದು ಆಗಿದೆ ಎಂಬುದನ್ನು ನಾನು ಖಂಡಿತವಾಗಿ ಅಲ್ಲಗೆಳೆಯುತ್ತೇನೆ. ಘಟನಾವಳಿಗಳ ಬಗ್ಗೆ ಮಾತನಾಡಬೇಕೆಂದರೆ ನಾನು ಹುಬ್ಬಳ್ಳಿಯಿಂದ ರಾತ್ರಿ ಬಂದೆ 8.20ಕ್ಕೆ ಘಟನಾವಳಿಗಳು ನಡೆದವು. 20 ನಿಮಿಷದೊಳಗೆ ಫೈರ್ ಫೋರ್ಸ್‌ನ ಡಿ.ಜಿ.ಪಿ. ಶ್ರೀ ವಸಂತಕುಮಾರ್ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಹೋಗಿ ಆ ಪ್ರದೇಶವನ್ನು ನೋಡಿದ್ದಾರೆ. ಡಿ.ಜಿ.ಪಿ. ಮತ್ತು ಉನ್ನತ ಅಧಿಕಾರಿಗಳು ಸಿಬ್ಬಂದಿ ವರ್ಗದವರ ಜೊತೆ ಹೋಗಿ ಬೆಂಕಿಯನ್ನು ಹತೋಟಿಗೆ ತಂದಿದ್ದಾರೆ. ಅಲ್ಲಿ ಇರತಕ್ಕದ್ದು ಎಲ್ಲಾ ಗರಿ ಗುಡಿಸಲುಗಳು. ತಾವು ಆ ಜಾಗಕ್ಕೆ ಹೋಗಿದ್ದೀರಿ ಎಂದು ಅಲ್ಲಿನ ಜನ ಹೇಳಿದರು. ಕೇವಲ 1 ಗಂಟೆಯೊಳಗೆ ಆ ಬೆಂಕಿಯನ್ನು ಸಂಪೂರ್ಣವಾಗಿ ಹತೋಟಿಗೆ ತರುವುದರಲ್ಲಿ ಯಶಸ್ವಿಯಾಗಿದ್ದಾರೆ. ಸುಮಾರು 700-800 ಜನರಿಗೆ ಪೋಲೀಸ್ ಇಲಾಖೆಯ ವತಿಯಿಂದ ಊಟದ ವ್ಯವಸ್ಥೆಯನ್ನು ಅವತ್ತು ರಾತ್ರಿಯೇ ಮಾಡಿದ್ದಾರೆ. ಮಾರನೆಯ ದಿನ ಅಂದರೆ ಘಟನಾವಳಿ ನಡೆದ 12 ಗಂಟೆಯೊಳಗೆ ರಾಜ್ಯದ ಗೃಹ ಮಂತ್ರಿಯಾಗಿ ನಾನು ಹೋಗಿದ್ದೇನೆ. ನಾನು ಹೋಗಿದುದ್ದು ಮಾನ್ಯ ಮುಖ್ಯ ಮಂತ್ರಿಗಳ ಆದೇಶದ ಮೇರೆಗೆ. ನಾನು ಆ ಜಾಗಕ್ಕೆ ಒಳಗಡೆ ಹೋಗಬೇಕಾದರೆ ಮತ್ತೆ ಅಲ್ಲಿರತಕ್ಕ ಗಠಾರದ ಪಕ್ಕದಲ್ಲಿ ಹೋಗಬೇಕು. ನ್ಯಾಷನಲ್ ಡೇರಿ ಸ್ವತ್ತಿನ ಪಕ್ಕದಲ್ಲಿ ಒಂದು ಗಠಾರ ಇದೆ. ಅದರ ಪಕ್ಕದಲ್ಲೇ ಹೋಗಬೇಕು. ನಾನು ಹೋಗುವಾಗ ಅಲ್ಲಿದ್ದ ಕೆಲವರು ತಮ್ಮ ಮನೆಯಲ್ಲಿದ್ದ ತಪ್ಪಲೆ ಚೆಂಬು ಇನ್ನಿತರೆ ಸಾಮಾನುಗಳನ್ನೆಲ್ಲಾ ಪಕ್ಕಕ್ಕೆ ಎತ್ತಿ ಇಡುತ್ತಿದ್ದರು. ಇವರೆಲ್ಲಾ ಇದನ್ನು ಏತಕ್ಕೆ ಇಡುತ್ತಿದ್ದಾರೆಂದು ನಾನು ಕೇಳಿದಾಗ ಅದಕ್ಕೆ ಅವರಲ್ಲಿ ಉತ್ತರ ಇರಲಿಲ್ಲ. ನಾನು ಹೋದಾಗ ಅಲ್ಲಿ ಮಾನ್ಯ ಶಾಸಕರಾದ ಶ್ರೀನಿವಾಸ್‌ರವರು ಇದ್ದರು, ಜಿಲ್ಲಾಧಿಕಾರಿಗಳು ಇದ್ದರು. ನಗರದ ಕಾರ್ಪೊರೇಷನ್ ಅಧಿಕಾರಿಗಳಿದ್ದರು, ನಗರ ಕಾರ್ಪೊರೇಷನ್ ಕಮಿಷನರ್‌ರವರು ರಾತ್ರಿಯೇ ಅಲ್ಲಿಗೆ ಬಂದು ಹೋಗಿದ್ದರು. ನಾನು ಎಲ್ಲ ಉಸ್ತುವಾರಿಯನ್ನೂ ಅಲ್ಲಿ ಮಾಡಿಸಿದೆ. ನಾಳೆ ಮಧ್ಯಾಹ್ನದೊಳಗಡೆ ಅವರಿಗೆಲ್ಲಾ ಊಟದ ವ್ಯವಸ್ಥೆ, ನೀರಿನ ವ್ಯವಸ್ಥೆ, ಕರೆಂಟ್ ವ್ಯವಸ್ಥೆಯನ್ನೆಲ್ಲಾ ಮಾಡಿಸಿ ಅವತ್ತು ಸಂಜೆ ಮಾನ್ಯ ಮುಖ್ಯ ಮಂತ್ರಿಗಳು ಬರುತ್ತಾರೆಂದು ಹೇಳಿ, ಅವರೆಲ್ಲರಿಗೂ ತಿಳಿಸಿದೆ. ಆದರ ಪ್ರಕಾರ ಮಾನ್ಯ ಮುಖ್ಯ ಮಂತ್ರಿಗಳು ಅವತ್ತು ಸದನ ಮುಗಿದ ನಂತರ ಮಾಡಿದ ಮೊದಲನೇ ಮುಖ್ಯ ಕೆಲಸವೆಂದರೆ ಅಲ್ಲಿಗೆ ಭೇಟಿ ಮಾಡಿದುದು. ಅಲ್ಲಿಗೆ ಅವರು ಭೇಟಿ ನೀಡಿ ಎಲ್ಲಾ ಅಧಿಕಾರಿಗಳ ಜೊತೆಯಲ್ಲೂ ಚರ್ಚೆ ಮಾಡಿ, ಮಾನ್ಯ ಮುಖ್ಯ ಮಂತ್ರಿಗಳೇ ನಗರ ಕಾರ್ಪೊರೇಷನ್ ವತಿಯಿಂದ ಅನಾಹುತಕ್ಕೆ ಒಳಗಾಗಿದ್ದಂಥ 145 ಕುಟುಂಬಗಳಿಗೂ ಬಟ್ಟೆಯನ್ನು ಕೊಟ್ಟಿದ್ದಾರೆ. ಇದು ಎರಡನೇ ವಿಚಾರ. ಊಟದ ವ್ಯವಸ್ಥೆಯನ್ನೂ

ಕೂಡ ನಾವು ಮಾಡಿದ್ದೇವೆ. ಅಲ್ಲಿ ಒಂದು ಶಾಮಿಯಾನವನ್ನೂ ಕೂಡ ನಾವು ಮಾಡಿದ್ದೇವೆ. ಇದು ನಡೆದಿರತಕ್ಕ ಘಟನಾವಳಿ. ಇದಕ್ಕೆ ಶಾಶ್ವತವಾದ ಪರಿಹಾರಗಳನ್ನು ಕಂಡು ಹಿಡಿಯಬೇಕು. ಇದರಲ್ಲಿ ಎರಡುಮೂರು ಅಂಶಗಳಿವೆ. ಮಾನ್ಯ ಶ್ರೀನಿವಾಸ್‌ರವರು ಹೇಳಿದ್ದರಲ್ಲಿ ಅರ್ಧ ಸತ್ಯ ಇದೆ ಎಂದು ಹೇಳಿದೆ. ಆ ಸತ್ಯ ಏನೆಂದರೆ, ಕೆಲವರು ಉದ್ದೇಶಪೂರ್ವಕವಾಗಿಯೇ ಅಂದರೆ ಅದು ಏನೆಂದು ನನಗೆ ಗೊತ್ತಿಲ್ಲ. ಅಲ್ಲಿ ನನಗೆ ನನ್ನದೇ ಆದಂಥ ಅಭಿಪ್ರಾಯಗಳಿವೆ. ಆದರೆ ಈ ಹಂತದಲ್ಲಿ ಅದನ್ನೆಲ್ಲಾ ಇಲ್ಲಿ ಬಯಲಿಗೆ ಎಳೆಯುವುದಕ್ಕೆ ಬಯಸುವುದಿಲ್ಲ. ಏಕೆಂದರೆ, ಇದರ ಬಗ್ಗೆ ವಿಚಾರಣೆಯನ್ನು ನಡೆಸಿ ನಮಗೆ ಒಂದು ವರದಿಯನ್ನು ಕೊಡಬೇಕೆಂದು ನಾವು ಪೋಲೀಸ್ ಇಲಾಖೆಯ ಮುಖ್ಯಸ್ಥರಿಗೆ ತಿಳಿಸಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಆದೇಶ ಕೊಟ್ಟಿದಾರೆ. ಆ ವರದಿ ಬರಲಿ. ಏತಕ್ಕೆ ಈ ರೀತಿ ಬೆಂಕಿ ಹಾಕಿಕೊಳ್ಳುತ್ತಿದ್ದಾರೆ ? ಯಾವ ಕಾರ್ಣಕ್ಕೋಸ್ಕರ ಹಾಕಿಕೊಳ್ಳುತ್ತಿದ್ದಾರೆ? ಯಾರು ಹಾಕುತ್ತಿದ್ದಾರೆ, ಇದೆಲ್ಲಾ ವಿಚಾರಣೆ ಆದಮೇಲೆ ವಾಸ್ತವಾಂಶವನ್ನು ಈ ಸದನದಲ್ಲಿ ನಾವು ಮಂಡಿಸುತ್ತೇವೆ. ಇದರಲ್ಲಿ ಯಾವ ತೊಂದರೆ ಇಲ್ಲ. ಈಗ ಇದಕ್ಕೆ ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯಬೇಕು. ಇದು ಬಹಳ ಮುಖ್ಯವಾಗಿರತಕ್ಕದ್ದು. ಬೆಂಗಳೂರು ನಗರದಲ್ಲಿ ಇಂಥ ಗುಡಿಸಲುಗಳು ಬಹಳ ದೊಡ್ಡ ಪ್ರಮಾಣದಲ್ಲಿವೆ. ಇವತ್ತು ಬೆಳಿಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಮತ್ತೊಂದು ಸಭೆ ನಡೆದಿದೆ. ಬಿ.ಡಬ್ಲ್ಯು.ಎಸ್.ಎಸ್.ಬಿ.ಯವರು, ಬಿ.ಡಿ.ಎ.ನವರು, ಕಾರ್ಪೊರೇಷನ್‌ನವರು, ಸ್ಲಂ ಬೋರ್ಡ್‌ನವರು, ಹೋಂ ಕಮಿಷನರ್‌ರವರು, ಇತ್ಯಾದಿ ಎಲ್ಲಾ ಮುಖ್ಯಸ್ಥರೂ ಆ ಸಭೆಯಲ್ಲಿ ಭಾಗವಹಿಸಿದ್ದರು. ನಾನೂ ಕೂಡ ಆ ಸಭೆಯಲ್ಲಿ ಭಾಗಬಹಿಸಿದ್ದೆ. ಎಲ್ಲರೂ ಕುಳಿತು ಚರ್ಚೆ ಮಾಡಿದಾಗ ಬೆಂಗಳೂರಿನಲ್ಲಿ ಇಂತಹ ಗರಿಗಳನ್ನು ಹಾಕಿಕೊಂಡಿರತಕ್ಕ ಗುಡಿಸಲುಗಳು ಎಲ್ಲೆಲ್ಲಿವೆ,. ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಗುರುತಿಸಿದ್ದಾರೆ. ಇದು ಕೇವಲ ಉತ್ತರಹಳ್ಳಿಯಲ್ಲಿ ಮಾತ್ರ ಇರುವುದಿಲ್ಲ. ಇವು ಒಂದು ದಿನದಲ್ಲಿ ಬಂದಿರತಕ್ಕವಲ್ಲ. ಬಿ.ಡಿ.ಎ.ನಲ್ಲಿ ಕೆಲವು ಸ್ಲಂಗಳಿವೆ, ಸ್ಲಂಬೋರ್ಡ್‌ನಿಂದ ಕೆಲವು ಸ್ಲಂಗಳಿವೆ, ಸ್ಲಂ ಬೋರ್ಡ್‌ನಲ್ಲಿ ಕೆಲವು ವೆಸ್ಟೆಡ್ ಇಂಟರೆಸ್ಟ್‌ಗಳಿವೆ. ಇದನ್ನೆಲ್ಲಾ ಗಮನದಲ್ಲಿ ಇಟ್ಟುಕೊಂಡು ಬೆಂಕಿ ಅನಾಹುತಕ್ಕೆ ಒಳಗಾದಂಥ ಮನೆಗಳನ್ನು ಕಟ್ಟಿಕೊಡುವ ಶಾಶ್ವತವಾದ ತಮ್ಮದೇ ಆದ ಯೋಜನೆಗಳನ್ನು ತಯಾರಿಸುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಇವತ್ತು ಚರ್ಚೆ ಮಾಡಿದ್ದಾರೆ. ಆ ಸಭೆಯಲ್ಲಿ ಒಂದು ಅಂತಿಮ ತೀರ್ಮಾನಕ್ಕೆ ಬಂದಿದ್ದಾರೆ. ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಇವತ್ತು ಈ ಸಭೆಗೆ ತಿಳಿಸುವವರಿದ್ದಾರೆ. ತಾತ್ಕಾಲಿಕವಾಗಿ ಅವರಿಗೆ ಊಟಕ್ಕೆ, ಅವರಿಗೆ ಪರಿಹಾರ ಕೊಡುವುದಕ್ಕೆ ಹಾಗೂ ಇನ್ನಿತರ ಅಗತ್ಯ ನೆರವುಗಳಿಗೆ ಏನೇನು ಬೇಕು ಅದನ್ನೆಲ್ಲಾ ಈ ಸರ್ಕಾರ ಮಾಡಿದೆ, ಇನ್ನು ಮುಂದೆಯೂ ಕೂಡ ಮಾಡುತ್ತದೆ ಎಂಬ ಭರವಸೆಯನ್ನು ಸರ್ಕಾರದ ಪರವಾಗಿ ನಾನು ಈ ಸದನದಲ್ಲಿ ಕೊಡಬಯಸುತ್ತೇನೆ.

ಶ್ರೀ ಎಂ.ಶ್ರೀನಿವಾಸ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹ ಮಂತ್ರಿಗಳಿಗೆ ಆ ಸ್ಥಳ ಹೊಸದೇನೂ ಅಲ್ಲ. ಅವರು ಲೋಕಸಭಾ ಚುನಾವಣೆಗೆ ನಿಂತಾಗ ನಾನೂ ಅವರೂ ಒಟ್ಟಿಗೇ ಭಾಷಣ ಮಾಡಿದ್ದೆವು. ಸುಮಾರು 80 ಅಡಿ ಅಗಲದ ಒಂದು ರಸ್ತೆ ಅಲ್ಲಿದೆ. ಆ ರಸ್ತೆಯಿಂದ ಸ್ವಲ್ಪ ಈ ಕಡೆಗೆ ಅಲ್ಲಿ ಒಂದು ಬೇಲಿ ಇದೆ. ಅದರ ಸುತ್ತ ಈ ಜನ

ಇದ್ದಾರೆ. ಸುಮಾರು ವರ್ಷಗಳಿಂದ ಅವರಿದ್ದಾರೆ. ನೀವು ಅವರಿಗೆ ಊಟ ತಿಂಡಿ ಕೊಟ್ಟಿದ್ದೀರಿ. ಬಹಳ ಸಂತೋಷ. ಇವತ್ತು ನೀವು ಅವರಿಗೆ ಮಾಡಬೇಕಾಗಿರತಕ್ಕ ಕೆಲಸ ಎಂದರೆ, ಅವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಎಷ್ಟು ಸಾಲವನ್ನು ಕೊಡುತ್ತೀರಿ ಅಥವಾ ನೀವೇ ಮನೆಗಳನ್ನು ಕಟ್ಟಿಸಿಕೊಡುತ್ತೀರಾ ಅಥವಾ ಅವರೇ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ನೀವೆ ಅವರಿಗೆ ಹಣವನ್ನು ಕೊಡುತ್ತೀರಾ? ಇನ್ನೊಂದು ಪ್ರಸಂಗ ಎಂದರೆ ಈ ಹಿಂದೆ ಸುಮಾರು 350 ಗುಡಿಸಲು ಸುಟ್ಟು ಹೋದದ್ದು. ಅದರ ಬಗ್ಗೆ ಏನು ಮಾಡುತ್ತೀರಿ? ಆದರೆ ಆ ವಿಚಾರ ಈ ಸದನದಲ್ಲಿ ಹೇಳುವಂಥ ಪರಿಸ್ಥಿತಿ ಇಲ್ಲವೆಂದು ನೀವು ಹೇಳಬಹುದು. ಅದು ಯಾರ ಕಡೆ ಇದ್ದರೇನು? ಅದನ್ನು ಹೇಳಿ. ಅವರನ್ನು ಸಿಕ್ಕಿಹಾಕಿ. ಅವರು ಈ ಹಿಂದೆ ಇರಬಹುದು, ಅಥವಾ ಆ ಕಡೆ ಇರಬಹುದು. ಅವರು ಬಯಲಿಗೆ ಬರಲಿ. ಅದು ಯಾವುದೇ ಗುಂಪಿಗೆ ಸೇರಿದವರಿರಲಿ. ಆ ಬಡ ಜನತೆಯ ಗುಡಿಸಲುಗಳಿಗೆ ಬೆಂಕಿ ಹಾಕುವವರು ಯಾರೇ ಇರಲಿ ಅವರ ಬಗ್ಗೆ ಬಹಿರಂಗಪಡಿಸಿ. ನಿಮ್ಮ ಸರ್ಕಾರ ಅಧಿಕಾರದಲ್ಲಿದೆ. ಆ ಜನ ಯಾರಿದ್ದಾರೆ ಅವರನ್ನು ತೆಗೆದುಕೊಂಡು ಹೋಗಿ ಶಿಕ್ಷೆ ಮಾಡಿ.

ಇನ್ನೊಂದು ವಿಚಾರ ಎಂದರೆ ಕಾಡುಗೋಡಿಯಿಂದ ಬರತಕ್ಕ ರಸ್ತೆ. ಅದು ಒಂದು ಮುಖ್ಯ ರಸ್ತೆ. ಈಗಾಗಲೇ ಅಲ್ಲಿ ಒಳಚರಂಡಿ ನಿಂತು ಹೋಗಿದೆ. ಪೈಪ್‌ಗಳು ಬರದೆ ಈ ಒಳಚರಂಡಿ ಕೆಲಸ ಸಂಪೂರ್ಣವಾಗಿ ಬಂದ್ ಆಗಿದೆ. ನೀರಿನ ವ್ಯವಸ್ಥೆ ಇಲ್ಲ. ಈ ಮನೆಗಳನ್ನು ತಾವು ಯಾವಾಗ ಕಟ್ಟಿಸಿಕೊಡುತ್ತೀರೆಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಹೆಚ್.ಡಿ.ದೇವೇಗೌಡ:- ಮಾನ್ಯ ಅಧ್ಯಕ್ಷರೇ, ಈ ಘಟನೆ ನಡೆದಂಥ ಸ್ಥಳಕ್ಕೆ ನಾನು ಹೋದಂಥ ಸಂದರ್ಭದಲ್ಲಿ ನಾನು ನೋಡಿದಂಥ ದೃಶ್ಯಕ್ಕೆ ರಾಜಕೀಯವನ್ನು ಬೆರೆಸುವ ಅವಶ್ಯಕತೆ ಇಲ್ಲ. ಎಲ್ಲದರಲ್ಲೂ ರಾಜಕೀಯವನ್ನು ಮಾಡಿ ಯಾರೂ ಮೇಲಕ್ಕೆ ಬರುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಎರಡು ಎಕರೆ ಜಾಗ ಇದೆ. ಅಲ್ಲಿ ಯಾವ ಜನಗಳು ವಾಸ ಮಾಡುತ್ತಿದ್ದರು ಅವರನ್ನು ನಾನು ಹೋದಾಗ ಕೇಳಿದೆ. ಅಲ್ಲಿ ಸುಮಾರು 168 ಗುಡಿಸಲುಗಳಿವೆ. ಆ ಗುಡಿಸಲುಗಳಿಗೆ ಬೆಂಕಿ ಬಿದ್ದಿದೆ. ಆ ಗುಡಿಸಲುಗಳಲ್ಲಿದ್ದ ಪಾತ್ರೆಗಳು, ತಿನ್ನುವ ಅನ್ನ, ಒಳಗಡೆ ಇಟ್ಟುಕೊಂಡಿದ್ದ ಬಟ್ಟೆಬರೆ, ಅಲ್ಪಸ್ವಲ್ಪ ಆಹಾರ, ಹಣಕಾಸಿನ ಸಣ್ಣಪುಟ್ಟ ಸಂಗ್ರಹಣೆ ಇದನ್ನೆಲ್ಲಾ ಸಂಪೂರ್ಣವಾಗಿ ಭಸ್ಮವಾಗಿದೆ. ಅಲ್ಲಿ ನಾವು ನಿರ್ಣಯ ಮಾಡಿದ್ದು ಅದೇ ಜಾಗದಲ್ಲೇ ಈ 168 ಜನರಿಗೂ ಸಾಲು ಮನೆಗಳನ್ನು ಕಟ್ಟಿಸಿ ಎರಡೂ ಕಡೆ ಆ್ಯಸ್ ಬೆಸ್ಟ್ ಆ್ಯಸ್ ಷೀಟುಗಳನ್ನು ಹಾಕಿಸಿ 2 ತಿಂಗಳಲ್ಲೇ ಆ ಮನೆಗಳನ್ನು ಕಟ್ಟಿ ಮುಗಿಸಿಕೊಡಬೇಕೆಂದು ಮಾಡಿದೆವು. ಇದಕ್ಕೆ ಸುಮಾರು 17- 18 ಲಕ್ಷ ರೂ. ಆಗುತ್ತದೆ. ನಾವು ಹೇಳಿ ಈ ಕಡೆ ಬಂದಮೇಲೆ ಇದನ್ನು ಕೇಳಿಸಿಕೊಂಡ ಆ ಜನ ನಾವು ಮನೆಯನ್ನು ಸುಟ್ಟುಕೊಂಡರೆ ಹೇಗೂ ನಮಗೂ ಮನೆಗಳನ್ನು ಕಟ್ಟಿಸಿಕೊಡುತ್ತಾರೆಂದು ಅವರು ಮನೆಯಲ್ಲಿದ್ದುದನ್ನೆಲ್ಲಾ ತೆಗೆದು, ಪಾತ್ರೆ ಪಗಡುಗಳನ್ನೆಲ್ಲಾ ಹೊರಗಡೆ ಇಟ್ಟು ತಾವೇ ಬೆಂಕಿಯನ್ನು ಹಾಕಿಕೊಳ್ಳುವುದಕ್ಕೆ ಶುರು ಮಾಡಿದರೆ ನಾವು ಎಲ್ಲಿಯವರೆಗೆ ಇವರಿಗೆ ಸಹಾಯ ಮಾಡಬೇಕು. ಹಾಗೆಲ್ಲಾ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವುದಾದರೂ ಇರಬಹುದು. ಆದರೆ ಸತ್ಯವನ್ನು ನಾವು ಹೇಳಬೇಕು. ನಾನು ಸತ್ಯವನ್ನು

ಹೇಳಬೇಕಾಗುತ್ತದೆ. ತಾವು ಈಗಲೂ ಬೇಕಾದರೆ ಅಲ್ಲಿಗೆ ಹೋಗಿ ನೋಡಬಹುದು. ನಾನೂ ಬರುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರೂ, ಸಹೋದರಿ ಪ್ರಮೀಳಾರವರೂ ಇನ್ನೂ ಕೆಲವರು ಅಲ್ಲಿಗೆ ಹೋಗಿಬರೋಣ. ಆ ಜನರು ತಮ್ಮ ಮನೆಯಲ್ಲಿದ್ದ ಎಲ್ಲಾ ಸಾಮಾನುಗಳನ್ನೂ ತೆಗೆದು ಹೊರಗಡೆ ಇಟ್ಟು ಅನಂತರ ಬೆಂಕಿ ಹಾಕಿಕೊಂಡಿದ್ದಾರೆ. ಇದನ್ನು ಯಾರು ಮಾಡುತ್ತಾರೆ. ಇದನ್ನು ನೀವೂ ಮಾಡಿಲ್ಲ, ನಾವೂ ಮಾಡಿಲ್ಲ. ಬೇರೆಯವರೂ ಮಾಡಿಲ್ಲ. ಪೋಲೀಸ್ ವರದಿ ಇದು. ಆ ಪೋಲೀಸ್ ಅಧಿಕಾರಿಗಳು ಬಂದು ಸ್ವಾಮಿ, ನಾವು ಮನೆಯನ್ನು ಕಟ್ಟಿಸಿಕೊಡುತ್ತೇವೆಂದು ತಾವು ಹೇಳಿದ್ದೇ ಅಪರಾಧವಾಯಿತು ನೋಡಿ ಎಂದು ಹೇಳಿದರು. ಅದು ಏನೇ ಇರಲಿ, ಸ್ವಾಭಾವಿಕವಾಗಿ ಕಷ್ಟದಲ್ಲಿರುವ ಜನರು ಪರಿಹಾರವನ್ನು ಕಂಡು ಹಿಡಿದುಕೊಳ್ಳುವುದಕ್ಕೆ ಒಂದಲ್ಲೊಂದು ವಾಮ ಮಾರ್ಗವನ್ನು ಹಿಡಿದರು. ಅದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಇವತ್ತು ಬೆಳಿಗ್ಗೆ ನಮ್ಮ ಅಧಿಕಾರಿಗಳ ಜೊತೆ ಪುನ: ಒಂದು ಸಮಾಲೋಚನೆ ಮಾಡಿದೆ. ಮಹಾರಾಷ್ಟ್ರದಲ್ಲಿ ಶರದ್ ಪವಾರ್‌ರವರು ಒಂದು ಸ್ಕೀಂನ್ನು ಜಾರಿಗೆ ತಂದಿದ್ದಾರೆಂದು ಅವರು ಹೇಳಿದರು. ಎಲ್ಲಿ ಸ್ಲಂಸ್ ಇವೆ ಅಲ್ಲಿ ಎಷ್ಟು ಭೂಮಿ ಇದೆ ಅದರಲ್ಲಿ ಒಂದು ಭಾಗವನ್ನು ಬಿಲ್ಡರ್ಸ್‌ಗೆ ಕೊಟ್ಟರೆ ಇನ್ನೊಂದು ಭಾಗದಲ್ಲಿ ಅರ್ಧ ಅಥವಾ ಮುಕ್ಕಾಲು ಭಾಗವನ್ನು ಗ್ರೂಪ್ ಹೌಸಿಂಗ್ ಮಾಡಿದ್ದಾರೆ. ಅಲ್ಲಿರತಕ್ಕ ಎಲ್ಲರಿಗೂ ಅವರೇ ಮನೆಗಳನ್ನು ಕಟ್ಟಿಸಿಕೊಟ್ಟು ಇನ್ನು ಅಲ್ಪಸ್ವಲ್ಪ ಜಾಗ ಉಳಿದರೆ ಅದನ್ನು ಬಿಲ್ಡರ್ಸ್‌ಗೆ ಉಳಿಸಿಕೊಳ್ಳುವುದೆಂದು ಮಾಡಿ, ಇನ್ನುಳಿದ ಅರ್ಧ ಭಾಗದಲ್ಲಿ ಅಲ್ಲಿರತಕ್ಕ ಎಲ್ಲ ಜನರಿಗೂ 4-5 ಮಹಡಿಗಳ ಮನೆಗಳನ್ನು ಪುಕ್ಕಟೆಯಾಗಿ ಕೊಡುವಂಥ ಒಂದು ಸ್ಕೀಂನ್ನು ಜಾರಿಗೆ ತಂದಿದ್ದಾರೆಂತೆ. ಆ ಸ್ಕೀಂ ಬಹಳ ಯಶಸ್ವಿಯಾಗಿ ಆಗಿದೆ ಎಂದು ಕೇಳಿದೆ. ಇದೇ ರೀತಿ ತಮಿಳುನಾಡಿನಲ್ಲೂ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಇವತ್ತು ಬೆಳಿಗ್ಗೆ ನಮ್ಮ ಹಿರಿಯ ಅಧಿಕಾರಿಗಳ ಸಭೆಯನ್ನು ಕರೆದು ಇದೇ ವಿಚಾರವನ್ನು ಚರ್ಚೆ ಮಾಡಿ ಸೋಮವಾರ ಅಥವಾ ಮಂಗಳವಾರ ಸ್ಲಂನಲ್ಲಿ ವಾಸ ಮಾಡತಕ್ಕ ಜನರಿಗೆ ಮನೆಗಳನ್ನು ನಿರ್ಮಿಸಿಕೊಡುವುದಕ್ಕೆ ಈ ಬಿಲ್ಡರ್ಸ್‌ನಿಂದ ಸಾಧ್ಯವೇ ಎಂಬ ಬಗ್ಗೆ ಒಂದು ನೀತಿಯನ್ನು ರೂಪಿಸಿ ಸಭೆಯ ಮುಂದಿಡಬೇಕೆಂದಿದ್ದೇನೆ. ಈಗ ಈ ಸಭೆ ಏನು ತನ್ನ ಅಭಿಪ್ರಾಯ ನೀಡುತ್ತದೆ ಅದನ್ನು ತೆಗೆದುಕೊಂಡು ನಂತರ ಒಂದು ಅಂತಿಮ ನಿರ್ಣಯವನ್ನು ಘೋಷಣೆ ಮಾಡೋಣ ಎಂದು ಇದ್ದೇನೆ. ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಏನು ಕೆಲವು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ ಅದರ ರೂಪುರೇಷೆಗಳನ್ನು ತಿಳಿದುಕೊಂಡು ಒಂದು ಡ್ರಾಫ್ಟ್ ಸೋಮವಾರ ಅಥವಾ ಮಂಗಳವಾರ ಈ ಸಭೆಯ ಮುಂದಿಡುತ್ತೇನೆ. ಆಗ ಸದನದ ಅಭಿಪ್ರಾಯವನ್ನು ತೆಗೆದುಕೊಂಡು ನಾವು ಮುಂದೆ ಹೋಗುತ್ತೇವೆ. ಈ ಮಧ್ಯ ಮನೆ ಕಟ್ಟಿಸಬೇಕೆಂದು ಕಾರ್ಪೊರೇಷನ್‌ನಿಂದ ಹತ್ತು ಲಕ್ಷ, ನಾವು ಸರ್ಕಾರದಿಂದ 8 ಲಕ್ಷ ಕೊಟ್ಟು ಮಾಡಿಸೋಣ ಎಂದರೆ ಮೊದಲೇ 168 ಮನೆ ಎಲ್ಲಾ ಪಟ್ಟಿ ಮಾಡಿದ್ದಾರೆ. ಸ್ಲಂ ಕ್ಲಿಯರೆನ್ಸ್ ಬೋರ್ಡ್‌ನಿಂದ ಅಧಿಕೃತ ಪಟ್ಟಿ ಮಾಡಿ ಐಡೆಂಟಿಫಿಕೇಷನ್ ಸ್ಲಿಪ್ಸ್ ಕೊಟ್ಟಿದ್ದಾರೆ. ಮತ್ತೆ ಇವರೇ ಬೆಂಕಿ ಹಚ್ಚುವುದಕ್ಕೆ ಹೋದರೆ ಹೇಗೆ ? ಪೋಲೀಸ್ ವರದಿಯನ್ನು ಕೇಳಿದ್ದೇನೆ, ಆದರೆ ಅದೇನೂ ಬೇಕಾಗಿಲ್ಲ. ಏಕೆಂದರೆ ಕೈಯಲ್ಲಿರುವ

ಹುಣ್ಣಿಗೆ ಕನ್ನಡಿ ಬೇಕೆ ? ಅಲ್ಲಿರತಕ್ಕ ಜನರಿಗೆ ಸರ್ಕಾರ ಪರಿಹಾರ ದೊರಕಿಸಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಇದರಲ್ಲಿ ಪ್ರಾಮಾಣಿಕತೆ ಏನು? ಮಾನ್ಯ ಮುಖ್ಯ ಮಂತ್ರಿಗಳು ಅವರದೇ ಬೆಂಕಿ ಹಚ್ಚಿಕೊಂಡರು ಎಂದರು.

ಶ್ರೀ ಹೆಚ್. ಡಿ. ದೇವೇಗೌಡ:- 168 ಮನೆಗಳೆಲ್ಲಾ ಸಂಪೂರ್ಣವಾಗಿ ಭಸ್ಮವಾಗಿವೆ. ಬಾಕಿಯವರು ಎಲ್ಲಾ ತಮ್ಮ ಸಾಮಾನುಗಳನ್ನು ಬೇರೆ ಕಡೆ ಇಟ್ಟುಕೊಂಡು ಬೆಂಕಿ ಹಾಕಿಕೊಂಡಿದ್ದಾರೆ....

(ಗೊಂದಲ)

ಶ್ರೀ ಎಂ. ಶ್ರೀನಿವಾಸ್:- ಆ ತರಹ ಇರುವವರು ಇದ್ದಾರೆ. ಅವರಿಗೆ ಶಿಕ್ಷೆ ಮಾಡಿ, ಶಿಕ್ಷೆ ಮಾಡಲಿಕ್ಕೆ ನಿಮಗೆ ಅಧಿಕಾರ ಇದೆ. ಇವತ್ತು 9 ಜನರು ಆಸ್ಪತ್ರೆಯಲ್ಲಿದ್ದಾರೆ. ಅವರೇ ಬೆಂಕಿ ಇಟ್ಟುಕೊಂಡು ಸುಟ್ಟುಕೊಂಡು ಆಸ್ಪತ್ರೆಗೆ ಹೋಗುತ್ತಾರೆಯೆ? ಯಾರೋ ಒಬ್ಬಿಬ್ಬರು ಇರಬಹುದು, ಎಲ್ಲರೂ ಹಾಗ ಇಲ್ಲ. ಸುಟ್ಟುಹೋದ ಪಾತ್ರೆ ಸಾಮಾನುಗಳನ್ನು ಅಲ್ಲಿಂದ.....

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾನಾಯಕರು ಒಂದು ಮಾತು ಹೇಳಿದ್ದಾರೆ. ಕಂಟಿನ್ಯೂಯಸ್ ಆಗಿ ಆ ಏರಿಯಾದಲ್ಲಿ ಬೆಂಕಿ ಬೀಳುತ್ತದೆ ಎಂದು. ಎಲ್ಲಿ ಯಾವ ಏರಿಯಾದಲ್ಲಿ ? ಯಾವ ಕೋರಮಂಗಲದಲ್ಲಿ ಕ್ರೀಡಾ ಸಮುಚ್ಚಯವನ್ನು ಕಟ್ಟುತ್ತಿದ್ದಾರೆ ಆ ಏರಿಯಾದಲ್ಲಿ. ಅಲ್ಲಿ 6-7 ಸಾವಿರ ಮಂದಿ ಬಡವರು ಎಲ್ಲಿಂದಲೋ ಬಂದು ಇರುವವರು. ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದೆ, ಈ ಕ್ರೀಡಾ ಸಮುಚ್ಚಯ ಏನು ಬರುತ್ತಿದೆ, ಇಷ್ಟು ದೊಡ್ಡ ಕಾಂಪ್ಲೆಕ್ಸ್ ಏನು ಕಟ್ಟುತ್ತಿದ್ದಾರೆ 3 ಸಾವಿರ ಮನೆಗಳನ್ನು ಕಟ್ಟಿಸುತ್ತಿದ್ದೀರಿ ಅದಕ್ಕೆ ಅಲ್ಲಿ ಸುತ್ತಮುತ್ತ ಅಪ್ರೋಚ್ ರೋಡ್ ಇಲ್ಲ. ಇವತ್ತಲ್ಲ ನಾಳೆ ಗುಡಿಸಲುಗಳಿಗೆ ತೊಂದರೆ ಆಗಬಹುದು; ಎತ್ತಂಗಡಿ ಆಗಬಹುದು. ನಾನು ಸ್ಥಳಕ್ಕೆ ಹೋಗಿದೆ. ಮಾನ್ಯ ಮುಖ್ಯ ಮಂತ್ರಿಗಳು ನೋಡಿದ್ದಾರೆ; ಗೃಹ ಮಂತ್ರಿಗಳು ನೋಡಿದ್ದಾರೆ, ಶ್ರೀನಿವಾಸ್ ಅವರು ಆ ಕ್ಷೇತ್ರದ ಶಾಸಕರು ಇದ್ದಾರೆ. ನಾನು ತಮ್ಮ ಮೂಲಕ ವಿನಂತಿಸುವುದು ಸಾಮೂಹಿಕ ಮನೆಯ ಬಗ್ಗೆ ಈಗ ಏತಕ್ಕೆ ಜ್ಞಾಪಕಕ್ಕೆ ಬಂತು ? ಇವತ್ತು ಬೆಂಗಳೂರು ನಗರದಲ್ಲಿ ಅನೇಕ ಸ್ಲಂಗಳು ಇವೆ. ಸಾಮೂಹಿಕವಾಗಿ ಮನೆ ಕಟ್ಟುವಂಥ ಹೊಸ ಯೋಜನೆ ನಿಮ್ಮ ಕಣ್ಮುಂದು ಬರುತ್ತಿರುವ ಉದ್ದೇಶ ಏನು ? ಅಲ್ಲಿ ಬಂದಂಥ ಕ್ರೀಡಾ ಸಮುಚ್ಚಯ ಏನಿದೆ ಅದರ ನೆಪದಲ್ಲಿ ಎಲ್ಲರಿಗೂ ಅನುಕೂಲ ಆಗಬೇಕೆಂದು ಮಾಡುವುದಕ್ಕೆ ನೀವು ಹೋಗುತ್ತಿದ್ದೀರೆಂದು ತಾವು ಆರ್ಥ ಮಾಡಿಕೊಳ್ಳಬೇಕೆ? ಇವತ್ತು ಏನು ಚರ್ಚೆಯಾಗುತ್ತಿದೆ, ಈ ಕ್ರೀಡಾ ಸಮುಚ್ಚಯ ನಡೆಯುವ ಕಡೆ ಅಪ್ರೋಚ್ ರೋಡ್ ಎಲ್ಲಿದೆ ? ನಿಮ್ಮ ಪ್ಲಾನ್ ಏನು? ಏನೇನು ಮಾಡಬೇಕೆಂದಿದ್ದೀರಿ ? ಓಪನ್ ಸ್ಪೆಸ್ ಎಲ್ಲಿದೆ ? ಪಾರ್ಕ್ ಎಲ್ಲಿ ಮಾಡುತ್ತೀರಿ. ಇವನ್ನು ಅವತ್ತಿನಿಂದ ಇವತ್ತಿನವರೆಗೆ ನಾವು ಕೇಳಿದರೆ ಹೇಳಲಿಲ್ಲ. ಯಾರಿಗಾದರೂ

ಬೀದಿಯಲ್ಲಿ ಹೋಗುವ ಒಬ್ಬ ಸಾಮಾನ್ಯ ವ್ಯಕ್ತಿಗೆ ಅನ್ನಿಸುತ್ತದೆ. ಇವತ್ತು ಬಡವರು ಭಯಭೀತರಾಗಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಬಹುದು, ಕೆಲವರು ಬೆಂಕಿ ಬಿದ್ದಾಗ ನನಗೂ ಮನೆ ಆಗಬಹುದೆಂದು ಅವರೇ ಬೆಂಕಿ ಹಚ್ಚಿಕೊಂಡಿದ್ದಾರೆ ಎಂಬುದನ್ನು ನಾನು ಇಲ್ಲವೆಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಯಾರೂ ಕೂಡ ಸಮಾಜದಲ್ಲಿ ತಮಗೆ ತಾವು ಬೆಂಕಿ ಹಚ್ಚಿಕೊಳ್ಳುವ ಕೆಲಸ ಮಾಡುವುದಿಲ್ಲ. ಯಾರೋ ತಿಳಿಗೇಡಿಗಳು ಮಾಡಿರಬಹುದು. ನಾನು ಬೆಂಗಳೂರು ಮಹಾನಗರದಲ್ಲಿ ಹಲವಾರು ಕಡೆಗಳಲ್ಲಿ ನೋಡಿಕೊಂಡು ಬಂದೆ ಒಂದು ವಾರದಲ್ಲಿ ಈ ಸ್ಲಂಗಳಿಗೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಅದೂ ಸದನ ನಡೆಯುತ್ತಿರಬೇಕಾದರೆ 4-5 ಕಡೆ ಬೆಂಕಿ ಹಚ್ಚಲಾಗಿದೆ. ಹೀಗಾದರೆ ಬಡವರು ಬದುಕುತ್ತಾರೆಯೆ ? ಗುಡಿಸಲುವಾಸಿಗಳ ಗತಿ ಏನು ? ಈ ಒಂದು ಸಾಮುದಾಯಿಕ ಮನೆಗಳನ್ನು ಕಟ್ಟುವಂಥದ್ದರ ಬಗ್ಗೆ ಹೇಳಿದಿರಿ. ಬೆಂಗಳೂರು ಮಹಾನಗರದಲ್ಲಿ ಎಲ್ಲಾ ಕಡೆ ಹಂತ ಹಂತವಾಗಿ ಯೋಜನೆ ಪ್ರಾರಂಭ ಮಾಡುತ್ತೀರಾ? ಇಲ್ಲ ಯಾವಾಗ ಮಾಡುತ್ತೀರಾ ? ನಮಗೆ ಭಯ ಇರತಕ್ಕದ್ದು 6-7 ಸಾವಿರ ಕುಟುಂಬಗಳು ಬೀದಿ ಪಾಲಾಗುತ್ತವೆ ಎಂಬುದು. ಎರಡನೆಯದು, ತಾವು ತಕ್ಷಣ ರಿಲೀಫ್ ಕೊಡಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳು ನಮಗೆ ಆಹ್ವಾನ ಮಾಡಿದ್ದಾರೆ. ದಯವಿಟ್ಟು ಸದನದ ಸಮಿತಿ ಮಾಡಿ. ಅದು ಬೇಡ ಅಂದರೆ ಗೃಹ ಸಚಿವರು ಮತ್ತು ಮುಖ್ಯ ಮಂತ್ರಿಗಳು ಹೋಗಲಿ. ಅವರು ಹೇಳಿದಂತೆ ಬೆಂಕಿ ಹಚ್ಚಿರುವ ಸ್ಥಳಕ್ಕೂ ಕ್ರೀಡಾ ಸಮುಚ್ಚಯ ಕಟ್ಟುತ್ತಿರುವ ಸ್ಥಳಕ್ಕೂ ಒಂದು ಕಿಲೋ ಮೀಟರ್ ಇದೆ ಅನ್ನುವುದಾದರೆ ಅವರು ಹೇಳಿದ ಹಾಗೆ ನಾನು ಕೇಳುತ್ತೇನೆ. ಮುಖ್ಯ ರಸೆಯಲ್ಲಿ 300-400-500 ಅಡಿಯಲ್ಲಿ ಈ ಕೆಲಸ ಆಗಿರಬೇಕಾದರೆ ಮಾನ್ಯ ಗೃಹ ಸಚಿವರು ಆ ಮಾತು ಹೇಳುವುದಾದರೆ ತಾವು ಬನ್ನಿ ಹೋಗೋಣ. ಪತ್ರಕರ್ತರೂ ಬರಲಿ. ಸತ್ಯ ಸಂಗತಿ ನೋಡೋಣ. ಇಲ್ಲದಿದ್ದರೆ ಸತ್ಯ ಸಂಗತಿಯನ್ನು ಮರೆಮಾಚಿ ಯಾರೋ ಕೋಟ್ಯಾಧಿಪತಿಗಳಿಗೆ ಅನುಕೂಲವಾಗಲು ಷಡ್ಯಂತ್ರ ಮಾಡುತ್ತಿದ್ದರೆ ದುರುದ್ದೇಶದಿಂದ ಆ ಕಾಂಪ್ಲೆಕ್ಸ್ ಕಟ್ಟುವ ಕೋಟ್ಯಾಧಿಪತಿಗಳು ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ಅದನ್ನು ತಡೆಯುವಂಥದ್ದು ಸರ್ಕಾರದ ಜವಾಬ್ದಾರಿಯಲ್ಲವೇ?

ಶ್ರೀ ಪಿ.ಜಿ.ಆರ್.ಸಿಂಧ್ಯ:- ನಾವು ಕೋಟ್ಯಾಧೀಶರಿಗೆ ಯಾರಿಗೆ ಸಹಾಯ ಮಾಡುವುದಕ್ಕೆ ಹೊರಟಿದ್ದೇವ ? ದಯವಿಟ್ಟು ಹೋಗಿ ನೋಡಿಕೊಂಡು ಬನ್ನಿ. ಆಮೇಲೆ ಮಾತನಾಡಿ....

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ಈಲ್ಡ್ ಆಗಿಲ್ಲ. ಬಿಲ್ಡರ್ಸ್ ಕರೆಯುತ್ತೇವೆ, ಮನೆ ಒಪ್ಪುವುದಾದರೆ ಕೊಡುತ್ತೇವೆ ಎಂಬ ಸೂಚನೆ ಏನಿದೆ ಇದು ಹೊಸ ಯೋಜನೆ. ಬೇರೆ ಕಡೆ ಏತಕ್ಕೆ ಈ ಯೋಜನೆ ಬರಲಿಲ್ಲ. ಇದರ ಅರ್ಥ ಸರ್ಕಾರಕ್ಕೆ ದುರುದ್ದೇಶ ಇದೆ ಎಂದು ಸ್ಪಷ್ಟವಾಗುತ್ತಿದೆ. ಅದಕ್ಕೋಸ್ಕರ ನಾನು ತಮ್ಮಲ್ಲಿ ವಿನಂತಿಸುತ್ತೇನೆ, ಎಲ್ಲಾ ಪಕ್ಷದ ಸದಸ್ಯರನ್ನು ಕರೆದುಕೊಂಡು ಹೋಗೋಣ, ತಾವು ಯಾರಾದರೂ ಬನ್ನಿ. ಸತ್ಯಸಂಗತಿ ತಿಳಿದುಕೊಂಡು ಆಮೇಲೆ ಮುಖ್ಯ ಮಂತ್ರಿಗಳು ಉತ್ತರ ಕೊಡಲಿ.

ಉಪಾಧ್ಯಕ್ಷರು:- ನೀವು ಹೇಳುವುದಕ್ಕೆ ಮುಂಚೆ ಅವರೇ ಹೇಳುತ್ತಿದ್ದಾರೆ ಹೋಗೋಣ ಎಂದು.

ಶ್ರೀ ಹೆಚ್.ಡಿ.ದೇವೇಗೌಡ:- ಸ್ವಲ್ಪ ಅವಕಾಶ ಕೊಟ್ಟರೆ ಹೇಳುತ್ತೇನೆ. 17-18 ಲಕ್ಷ ರೂಪಾಯಿಗಳಿಗೆ ಎಸ್ಟಿಮೇಟ್ ಮಾಡಿ ಅಲ್ಲಿ 168 ಜನರಿಗೆ ಅದೇ ಜಾಗದಲ್ಲಿ ಮನೆ ಕಟ್ಟಿಸಿಕೊಡಬೇಕೆಂದು ಬಿಲ್ಡರ್ಸ್‌ಗೆ ಕೊಡಬೇಕೆಂದು ಹೇಳಲಿಲ್ಲ. ನಾನು ಒಂದು ಸಲಹೆ ಮಾಡುತ್ತೇನೆ, ದಯವಿಟ್ಟು ಬೇಜಾರು ಮಾಡಿಕೊಳ್ಳಬೇಡಿ. ಎಲ್ಲದಕ್ಕೂ ರಾಜಕೀಯ ಬೆರೆಸಿದರೆ ಜನ ಏನು ತಿಳಿದುಕೊಳ್ಳುತ್ತಾರೆಂದು ಹೇಳುವುದಕ್ಕೆ ಹೋಗಬೇಡಿ. ತೀರ್ಮಾನ ಮಾಡುವವರು ಹೊರಗೆ ಇದ್ದಾರೆ. ಸ್ಪಾಟ್‌ನಲ್ಲಿ ಹೋಗಿ ಕುಳಿತುಕೊಂಡು 24 ಗಂಟೆಯಲ್ಲಿ ಮುಖ್ಯ ಇಂಜಿನಿಯರ್ ರವರಿಗೆ ಹೇಳಿ ಎಸ್ಟಿಮೇಟ್ ರೆಡಿ ಮಾಡಿ ವರ್ಕ್ ಸ್ಟಾರ್ಟ್ ಮಾಡಬೇಕೆಂದರೆ ಮತ್ತೆ ಬೆಂಕಿ ಹಚ್ಚಿಕೊಂಡು ಕುಳಿತಿದ್ದಾರೆ. ಅವರು ಹೇಳಿದರು, ಏನೋ ರಸ್ತೆ ತೆಗೆದುಕೊಂಡು ಹೋಗುತ್ತೇವೆ ನ್ಯಾಷನಲ್ ಗೇಮ್ಸ್‌ಗೆ ಎಂದು. ನಾನು ಆ ಜಾಗವನ್ನು ಆಯ್ಕೆ ಮಾಡಿದವನು ಅಲ್ಲ, ಈ ರಸ್ತೆ ಅಲ್ಲಿ ಬೇಕಾಗಿಲ್ಲ. ಏನಾದರೂ ಸಭೆಯಲ್ಲಿ ಹೇಳುವಾಗ ಸ್ವಲ್ಪ ವಿಚಾರ ಮಾಡಬೇಕು. ಇಲ್ಲಿ ಮಾಜಿ ಮುಖ್ಯ ಮಂತ್ರಿಗಳು ಇಬ್ಬರು ಇದ್ದೀರಿ, ನಂಜೇಗೌಡರು ಇದ್ದಾರೆ, ವಿರೋಧ ಪಕ್ಷದ ನಾಯಕರು ಇದ್ದಾರೆ, ವಾಟಾಳ್ ನಾಗರಾಜ್ ಅವರು ಇದ್ದಾರೆ, ನಾವೆಲ್ಲಾ ಹೋಗೋಣ. ಎಸ್ಟಿಮೇಟ್ ಈ ನಿಮಿಷದಲ್ಲಿ ನಾನು ಡ್ರಾ ಮಾಡಿಸುವುದಕ್ಕೆ ಆಗುವುದಿಲ್ಲ. ಎಸ್ಟಿಮೇಟನ್ನು ನಿಮ್ಮ ಮುಂದೆ ತರಿಸುತ್ತೇನೆ, ಎಸ್ಟಿಮೇಟ್ ನಿಮ್ಮ ಮುಂದೆ ಇಡುತ್ತೇನೆ. ಯಾರಿಗೋ ಪ್ರೊಜೆಕ್ಟ್ ಮಾಡುವುದಕ್ಕೆ ಅಂದರೆ ಅದಕ್ಕೆ ಏನಾದರೂ ಕಲ್ಪನೆ ಬೇಡವೇ ? ಎಲ್ಲದಕ್ಕೂ ಒಂದು ಮಿತಿ ಇರಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖಗೆ:- ಮುಖ್ಯ ಮಂತ್ರಿಗಳು ಹೇಳಿದ್ದನ್ನು ನಾವು ಒಪ್ಪಿಕೊಳ್ಳೋಣ. ಒಂದು ಮಾತನ್ನು ತಾವು ಬಹಳ ಲಘುವಾಗಿ ಹೇಳಿದಿರಿ. ಅದೇನೆಂದರೆ, ಬಡವರು ಮನೆ ಕಟ್ಟಿಸಿಕೊಡುತ್ತಾರೆ ಅಂದಾಕ್ಷಣ ಮನೆ ಸಾಮಾನು ಬೀದಿಗೆ ತಂದಿಟ್ಟು ತಾವೇ ಬೆಂಕಿ ಹಚ್ಚಿಕೊಳ್ಳುತ್ತಾರೆ ಎಂದು. ಯಾರೋ ಒಬ್ಬರಿಬ್ಬರು ಇರಬಹುದು. ಆದರೆ ಸಾರಾಸಗಟಾಗಿ ಬಡವರು ಇದೇ ರೀತಿ ಮಾಡುತ್ತಾರೆಂಬ ಕಲ್ಪನೆ ಬರಬಾರದು. ನಾಳೆ ತಮಗೆ ಗೊತ್ತಿದ್ದ ಹಾಗೆ ಗಂಗಾವತಿ ಆ ಭಾಬದಲ್ಲಿ ಅನೇಕ ಗುಡಿಸಲುಗಳು ಇರುತ್ತವೆ. ಬರೀ ದುಡ್ಡಿಗೋಸ್ಕರ ಬೆಂಕಿ ಹಚ್ಚಿಕೊಳ್ಳುತ್ತಾರೆಂದರೆ ತಪ್ಪಾಗುತ್ತದೆ. ದೊಡ್ಡ ದೊಡ್ಡ ಕಂಪನಿಗಳು, ಕಾಟನ್ ಮಿಲ್‌ನವರು ಇನ್‌ಷ್ಯೂರೆನ್ಸ್ ಸಿಗುತ್ತದೆಂದು ಅವರೇ ಬೆಂಕಿ ಹಚ್ಚುತ್ತಾರೆ. ಅಲ್ಲಿ ಕೋಟಿಗಟ್ಟಲೆ ಹಣ ಕೊಡುತ್ತಾರೆ. ಆದರೆ ಇಲ್ಲಿ ಬಡವರಿಗೆ ? ಎಲ್ಲೋ ಒಂದು ಕಡೆ ತಪ್ಪಾಗಿರಬಹುದು. ಅದನ್ನು ನೀವು ಇನ್‌ವೆಸ್ಟಿಗೇಷನ್ ಮಾಡಿ. ಆದರೆ ಹೀಗೆ ಮಾಡುತ್ತಾರೆಂದು ಅದೇ ಉದಾಹರಣೆ ತೆಗೆದುಕೊಂಡು ಎಲ್ಲಾ ಕಡೆ ಮನೆ ಕಟ್ಟಿಸಿಕೊಡುವುದಕ್ಕಾಗುವುದಿಲ್ಲ. ಎಲ್ಲೋ ಒಂದೆರಡು ಕಡೆ ಇದ್ದರೆ ಅದನ್ನು ಬಿಟ್ಟು ಬಿಡಿ. ಆದರೆ ಸಾರಸಗಟಾಗಿ ಹೇಳಿದರೆ ಅಧಿಕಾರಿಗಳು ಇದನ್ನೇ ತೆಗೆದುಕೊಳ್ಳುತ್ತಾರೆ.

ಶ್ರೀ ಹೆಚ್.ಡಿ.ದೇವೇಗೌಡ:- ನಾನು ಏನು ಹೇಳಿದೆ, ಯಾರು ಬೆಂಕಿ ಹಚ್ಚಿಕೊಂಡಿದ್ದಾರೆ ಅದು ಒಂದು ಕಡೆ ಆಲ್ಲ, ಬೆಂಗಳೂರಿನಲ್ಲಿ ಈಗಾಗಲೇ ನಾಲ್ಕು ಕಡೆ ಆಗಿದೆ. ರಾಷ್ಟ್ರೀಯ ಗೇಮ್ಸ್ ಹತ್ತಿರ ಆಯಿತು ಎಂದಲ್ಲ. ಶಾಂತಿ ನಗರದ ಹತ್ತಿರ ಸ್ಟೇಡಿಯಂ ಇದೆಯಲ್ಲಾ ಅಲ್ಲಿಯೂ ಆಗಿದೆ. ಹೀಗೆ 3-4 ಕಡೆ ಆಗಿದೆ. ನಾನು ಏನು ಹೇಳಿದ್ದೇನೆಂದರೆ ಮಹಾರಾಷ್ಟ್ರದಲ್ಲಿ ಮತ್ತು ತಮಿಳ್ನಾಡಿನಲ್ಲಿ ಏನು ಪ್ಯಾಟರ್ನ್ ಇದೆ ಎಂಬುದನ್ನೂ ಅಧಿಕಾರಿಗಳು ಹೇಳಿದರು. ಅದನ್ನು ನಾವು ಒಂದು ಸಾರಿ ನೋಡಿ ಎಲ್ಲಾ 450 ಸ್ಲಂಗಳು ಏನಿವೆ ಅವಕ್ಕೆ ಪರ್ಮನೆಂಟ್ ಆಗಿ ಏತಕ್ಕೆ ಗ್ರೂಪ್ ಹೌಸಿಂಗ್ ಸ್ಕೀಂ ತರಬಾರದೆಂದು ಚರ್ಚೆ ಬಂತು. ನಾನು ಹೇಳಿದೆ, ಹಾಗಿದ್ದ ಮೇಲೆ ವರ್ಕ್ ಔಟ್ ಮಾಡಿ ಸಭೆಯ ಮುಂದೆ ಇಡೋಣ ಎಂದು. ಅದು ಒಂದು ಕಡೆ ಆಲ್ಲ, ಇಡೀ ಬೆಂಗಳೂರು ನಗರದಲ್ಲಿ ಆಗಿವೆ. ಸ್ಲಂ ಏರಿಯಾದಲ್ಲಿ ಇರತಕ್ಕ ಜನರಿಗೆ ಖಾಯಂ ಆಗಿ ಮನೆ ಮಾಡಿಕೊಡುವುದಕ್ಕೆ ಸಾಧ್ಯವೇ? ಪ್ರೈವೇಟ್ ಕ್ಯಾಪಿಟಲ್ ಇನ್ವೆಸ್ಟ್ ಮಾಡಿ ಎಂಬುದನ್ನೂ ಯೋಚನೆ ಮಾಡುತ್ತಿದ್ದೇನೆ. ಎಲ್ಲವನ್ನೂ ಸರ್ಕಾರವೂ ಮಾಡುವುದಕ್ಕಾಗುವುದಿಲ್ಲ. ನೀವೂ ಮಾಡುವುದಕ್ಕಾಗಲಿಲ್ಲ. ನಾವೂ ಮಾಡುವುದಕ್ಕಾಗುವುದಿಲ್ಲ. ನಾಳೆ ಅವರು ಬಂದರೂ ಮಾಡುವುದಕ್ಕಾಗುವುದಿಲ್ಲ. ಬರೀ ಭ್ರಮೆ ಅಷ್ಟೆ. ಅವರು ಹಾಗೇ ಇರುತ್ತಾರೆ. ಶ್ರೀ ಶಾಮಣ್ಣನವರು ಇಲ್ಲಿ ಇದ್ದುಕೊಂಡು ಭಾಷಣ ಮಾಡುತ್ತಿದ್ದಾಗ 120 ಸ್ಲಮ್ಸ್ ಇತ್ತು. ಈಗ 480 ಆಗಿವೆ. ನಾಳೆ 600 ಆಗಬಹುದು. ಅದರ ಬಗ್ಗೆ ದೊಡ್ಡ ಚರ್ಚೆಗೆ ನಾನು ಹೋಗುವುದಿಲ್ಲ. ಈಗ ಏನಾದರೂ ಒಂದು ಖಾಯಂ ಆದಾ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ಸಾಧ್ಯವೇ ಎಂಬುದರ ಬಗ್ಗೆ ಅಧಿಕಾರಿಗಳ ಜೊತೆ 2 ರೌಂಡ್ಸ್ ಸಭೆ ಮಾಡಿ ಹೇಳಿದ್ದೇನೆ. ಇವರಿಗೆ ಅಕ್ಕಿ ಕೊಟ್ಟಿದ್ದೇವೆ. ಬಟ್ಟೆ ಕೊಟ್ಟಿದ್ದೇವೆ. ಕಂಬಳಿ ಕೂಡ ಕಾರ್ಪೊರೇಷನ್‌ನಿಂದ ಕೊಟ್ಟಿದ್ದೇವೆ. ಸರ್ಕಾರದಿಂದ ಪರಿಹಾರ ಹಣ ಕೊಡತಕ್ಕ ನಿರ್ಣಯ ಮಾಡಿದ್ದೇವೆ. ಮನೆ ಕಟ್ಟಿಸಿ ಕೊಡುವುದಕ್ಕೆ ಎಸ್ಟಿಮೇಟ್ ಮಾಡಿ ಎಂದು ಹೇಳಿದ್ದೇನೆ. ಈ ಸಭೆಯ ಮುಂದೆ ಇನ್ನು 5 ನಿಮಿಷದಲ್ಲಿ ಆ ಎಸ್ಟಿಮೇಟನ್ನು ಇಡುತ್ತೇನೆ. ಅಲ್ಲಿ ರಸ್ತೆ ಮಾಡುವುದಾದರೆ ನಾನು ಏಕೆ 18 ಲಕ್ಷ ರೂ.ಗಳ ಎಸ್ಟೀಮೇಟನ್ನು ಮಾಡಿಸುತ್ತಿದ್ದೆ. ತರುವುದಕ್ಕೆ ಹೇಳಿದ್ದೇನೆ. Far-fetched ಐಡಿಯಾ ಇಟ್ಟುಕೊಂಡು ಮಾತನಾಡುವುದು ಬೇಡ.

ಉಪಾಧ್ಯಕ್ಷರು:- ಸಾಕು ಸಾಕಷ್ಟು ಚರ್ಚೆಯಾಯಿತು.

(ಗೊಂದಲ)

ಶ್ರೀಮತಿ ಪ್ರಮೀಳ ಎಸ್.ನೇಸರ್ಗಿ :- ನಾನೂ ಸಹಿ ಹಾಕಿಕೊಟ್ಟಿರತಕ್ಕಂತಹವಳು. ನನಗೆ ಪ್ರಸ್ತಾಪ ಮಾಡುವುದಕ್ಕೆ ಬಿಡುವುದಿಲ್ಲ ಅಂದರೆ ಏನು ಇದು? ಒಂದು ನಿಮಿಷ ದಯವಿಟ್ಟು ಅವಕಾಶ ಕೊಡಿ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹುಬ್ಬಳ್ಳಿಗೆ ಹೋಗಿ ಬಂದ ಮೇಲೆ...

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ನೋಟೀಸ್‌ಗೆ ಅವರು ಸಹಿ ಮಾಡಿ ಕೊಟ್ಟಿದ್ದಾರೆ.

ಉಪಾಧ್ಯಕ್ಷರು:- ಅವರು ಸಹಿ ಮಾಡಿದ್ದಾರೋ. ಹಾಗಾದರೆ ಅವರು ಮಾತನಾಡಲಿ.

ಶ್ರೀಮತಿ ಪ್ರಮಿಳಾ ಎಸ್.ನೇಪಗಿ:- ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಗೃಹ ಮಂತ್ರಿಗಳು ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಪ್ರಾಯಶ: ತಾವು ಇಬ್ಬರೂ ಸ್ಪಾಟಿಗೆ ಹೊಗಿದ್ದೀರಿ. ನಾನೂ ಕೂಡ ಹೋಗಿದ್ದೆ. ನಾನು ತಮ್ಮ ಗಮನಕ್ಕೆ ತರುವ ವಿಷಯ ತಮ್ಮ ಗಮನಕ್ಕೆ ಇದುವರೆಗೂ ಬಂದಿಲ್ಲ. ನಾನು ಹೋದಾಗ ಕಂಡಿದ್ದುದು ಏನೆಂದರೆ, ಅಲ್ಲಿರತಕ್ಕ ಮಹಿಳೆಯರು 22 ತಾರೀಖು ರಾತ್ರಿ ಒಂದು ಗುಡಿಸಲನ್ನು ವ್ಯಕ್ತಿ ಬಂದು ಸುಟ್ಟಿದ್ದಾರೆ. ಸುಟ್ಟು ತಕ್ಷಣ ಅಲ್ಲಿದ್ದಂತಹ ಮಹಿಳೆಯರು ಆ ಇಬ್ಬರನ್ನೂ ಹಿಡಿದುಕೊಂಡು ಎದುರುಗಡೆ ಕಂಬಕ್ಕೆ ಕಟ್ಟಿ ಹಾಕಿದ್ದಾರೆ. ಕಂಬಕ್ಕೆ ಕಟ್ಟಿ ಹಾಕಿ ನಂತರ ಪೋಲೀಸ್ ರವರನ್ನು ಕರೆಯಿಸಿದ್ದಾರೆ. ಇವರು ಈ ಗುಡಿಸಲುಗಳನ್ನು ಸುಡುವುದಕ್ಕೆ ಬಂದಿದ್ದಾರೆ ಎಂದು ಹೇಳಿ ಕಟ್ಟಿ ಹಾಕಿದ್ದಾರೆ. ಕಟ್ಟಿ ಹಾಕಿದ ನಂತರ ಪೋಲೀಸ್‌ನವರು ಬಂದು ಹಿಡಿದುಕೊಂಡು ಹೋಗಿದ್ದಾರೆ. ತಾವು ದಯವಿಟ್ಟು ಈ ವಿಚಾರವನ್ನು ತಿಳಿದುಕೊಳ್ಳಬೇಕು. ಅವರು ಇವತ್ತು ಏನು ಹೇಳುತ್ತಿದ್ದಾರೆಂದರೆ ನಾವು ಹಿಡಿದು ಕೊಟ್ಟರೂ ಕೂಡ ಆ ಮೇಲೆ ಮಾರನೆ ದಿವಸ ರಾತ್ರಿ 12.00 ಗಂಟೆಗೆ ಅವರನ್ನು ಮತ್ತೆ ಬಿಟ್ಟಿದ್ದಾರೋ ಏನೋ ಗೊತ್ತಿಲ್ಲ. ಮತ್ತೆ ಬಂದು ಸುಟ್ಟಿದ್ದಾರೆ. ಇದನ್ನು ನಾನು ನೋಡಿರತಕ್ಕ ವಿಷಯ. ಪೋಲೀಸ್‌ನವರ ಎದುರುಗಡೆಯೆ ವಿಚಾರಣೆ ಮಾಡತಕ್ಕ ವಿಷಯ. ದಯವಿಟ್ಟು ಪೋಲೀಸ್‌ನವರನ್ನು ಈ ಬಗ್ಗೆ ವಿಚಾರಿಸಬೇಕು. 4 ಜನ ಗ್ಯಾಂಗ್‌ನಲ್ಲಿ ಬಂದು ಸುಟ್ಟಿದ್ದಾರೆ ಎನ್ನತಕ್ಕ ವಿಚಾರವನ್ನು ಪ್ರತ್ಯಕ್ಷವಾಗಿ ಹೇಳಿದ್ದಾರೆ. ದಯವಿಟ್ಟು ವಿಚಾರಿಸಬೇಕು. ಇಬ್ಬರನ್ನು ಅರೆಸ್ಟ್ ಮಾಡಿದ್ದಾರೆ. ಮಿಕ್ಕವರಿಬ್ಬರನ್ನು ಬಿಟ್ಟು ಹೋಗಿದ್ದಾರೆ. ಇದು ಕನ್ಸಸ್ಟೆಂಟ್ ಆಗಿ ಆಗಿರತಕ್ಕಂತಹದ್ದು. ಮೊದಲು ಅಶೋಕ ರೋಡ್‌ನಲ್ಲಿ ಆಯಿತು. ಈಜಿಪುರದಲ್ಲಾಯಿತು. ಮೈಸೂರು ರೋಡ್‌ನಲ್ಲಾಯಿತು. ಕೋರಮಂಗಲದಲ್ಲಾಯಿತು. ಇದರಿಂದ ಬೆಂಗಳೂರು ನಗರದಲ್ಲಿ ಏನಾಗಿದೆ ಎಂದರೆ ಗುಡಿಸಲು ನಿವಾಸಿಗಳಿಗೆ ಒಂದು ರೀತಿಯಲ್ಲಿ ಭಯ ಬಂದಿದೆ. ಯಾವತ್ತು ನಮ್ಮ ಗುಡಿಸಲುಗಳನ್ನು ಸುಟ್ಟು ಹಾಕುತ್ತಾರೋ; ಏನೋ ಎಂದು. ದಯಮಾಡಿ ತಿಳಿದುಕೊಳ್ಳಬೇಕು. ಫುಟ್‌ಬಾಲ್ ಸ್ಟೇಡಿಯಂನಲ್ಲಿ ಗರ್ಭಿಣಿ ಮಹಿಳೆ ಸತ್ತಿದ್ದಾಳೆ. ತಮಗೂ ಗೊತ್ತಿದೆ. ಆ ಮೇಲೆ 8 ದಿವಸದ ಮಗು. ತಾಯಿ ಮಗು ಹಾಗೂ ಗರ್ಭಿಣಿ ಮಹಿಳೆ ಸವಿತಾ ಎಂಬ ಮಹಿಳೆ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದಾಳೆ. ನಾನು ಇವತ್ತು ಕೇಳುತ್ತೇನೆ. ಎಲ್ಲಾ ಮಹಿಳೆಯರನ್ನು ಅಂದರೆ ಗರ್ಭಿಣಿ ಮಹಿಳೆ ಒಂದು ಕಡೆ ಮತ್ತು ಬಾಣಂತಿ ಮತ್ತು ಮಗು ಇಂತಹವರು ಸತ್ತಿದ್ದಾರೆ. ಇದರ ಬಗ್ಗೆ ಖಂಡಿತವಾಗಿ ಬಹಳ ದು:ಖವಾಗತಕ್ಕ ವಿಷಯ. ಎಲ್ಲಾ ಗುಡಿಸಲು ನಿವಾಸಿಗಳು ಹೆಣ್ಣು ಮಕ್ಕಳು ನನ್ನ ಹತ್ತಿರ ಬರುತ್ತಿದ್ದಾರೆ. ನಾವು ಬದುಕಿರುವುದಕ್ಕೆ

ಭಯವಾಗುತ್ತಿದೆ, ಯಾವಾಗ ನಮ್ಮ ಗುಡಿಸಲುಗಳನ್ನು ಸುಡುತ್ತಾರೋ ಎಂದು ಗೋಳಾಡುತ್ತಿದ್ದಾರೆ. ಸನ್ಮಾನ್ಯ ಗೃಹ ಮಂತ್ರಿಗಳು ಮಾತನಾಡುತ್ತಾ ಎಲ್ಲಾ ಮನೆಗಳನ್ನು ಖಾಲಿ ಮಾಡುತ್ತಿದ್ದಾರೆ. ಏಕೆ ಎಂದು ಗೊತ್ತಾಗಲಿಲ್ಲ ಎಂಬ ಒಂದು ಮಾತನ್ನು ಕೇಳಿದರು. ಅವರು ಹೇಳಿದಂತಹ ಮಾತು ಆ ಹೆಣ್ಣು ಮಕ್ಕಳು ಮಾತನಾಡುತ್ತಾ ನನ್ನ ಹತ್ತಿರ ಹೇಳಿದರು. ಮೇಡಂ ನಾವು ಇವತ್ತು ನಿನ್ನೆ ರಾತ್ರಿ ಪೋಲೀಸ್‌ನವರಿಗೆ ಹಿಡಿದುಕೊಟ್ಟರೂ ಕೂಡ ನಮ್ಮ ಗುಡಿಸಲುಗಳನ್ನು ಮಾರನೆಯ ದಿವಸ ಬಂದು ಸುಟ್ಟಿದ್ದಾರೆ. ಇವತ್ತು ಅವರು ಹೇಳಿ ಹೋಗಿದ್ದಾರೆ. ಹೆದರಿಸಿ ಹೋಗಿದ್ದಾರೆ. ಇವತ್ತು ಮಧ್ಯಾಹ್ನದೊಳಗೆ ಬಂದು ಈಗ ನಾವು ಇರತಕ್ಕ ಗುಡಿಸಲುಗಳನ್ನು ಸುಟ್ಟು ಹಾಕುತ್ತೇವೆಂದು ಹೇಳಿದ್ದಾರೆಂದು ಭಯ ಭೀತರಾಗಿ ಆ ಮಹಿಳೆಯರು ಹೇಳಿದರು. ನಾವು ನಮ್ಮ ನಮ್ಮ ಮಕ್ಕಳನ್ನು ಉಳಿಸಿಕೊಳ್ಳುವುದಕ್ಕೋಸ್ಕರ ನಾವು ಇದರಿಂದ ಹೊರಗೆ ಬರುತ್ತಾ ಇದ್ದೇವೆ ಎನ್ನುವ ಮಾತನ್ನು ಹೇಳಿದರು. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳನ್ನು ನಾನು ಕೇಳುತ್ತಾ ಇದ್ದೇನೆ. ಇದರಲ್ಲಿ ರಾಜಕೀಯವನ್ನು ಬೆರಸುತ್ತಿಲ್ಲ. ಇಲ್ಲಿರತಕ್ಕ ಕಷ್ಟ-ಸುಖವನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಹೆಣ್ಣು ಮಕ್ಕಳಿಗೆ ರಕ್ಷಣೆ ಕೊಡಿ. ಭಯ-ಭೀತರಾಗಿರತಕ್ಕ ಗುಡಿಸಲು ವಾಸಿಗಳನ್ನು ತಪ್ಪಿಸುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ತಾವು ದಯವಿಟ್ಟು ಹೇಳಬೇಕು. ಇದು ಆರನೆಯದು. ಸಡತಕ್ಕಂತಹದ್ದು ಒಂದೇ ಅಲ್ಲ ಗೃಹ ಮಂತ್ರಿಗಳೇ. ನಾಗಸಂದ್ರದಲ್ಲಿ 120 ಮನೆಗಳನ್ನು ಎಕ್ಸೈಸ್ ಕಂಟ್ರಾಕ್ಟರ್ ಪೋಲೀಸ್‌ನವರ ಸಮ್ಮುಖದಲ್ಲಿ ಎತ್ತಂಗಡಿ ಮಾಡಿದ್ದಾರೆ. ಎಕ್ಸೈಸ್ ಕಂಟ್ರಾಕ್ಟರ್ ಎತ್ತಿ ಹಾಕಿದ್ದಾರೆ. ನಾವು ಹೋಗಿ ಪೋಲೀಸ್ ಕಮೀಷನರ್‌ರವರನ್ನು ನೋಡಿ ಅವರನ್ನು ಮತ್ತೆ ಅಲ್ಲೇ ಇರಿಸುವುದಕ್ಕೆ ಪ್ರಯತ್ನಪಟ್ಟಿದ್ದೇನೆ. ಏತಕ್ಕೋಸ್ಕರ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ, ಎಲ್ಲಾ ಕಡೆ ಗುಡಿಸಲು ವಾಸಿಗಳಿಗೆ ಈ ರೀತಿಯ ತೊಂದರೆಯಾಗುತ್ತಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಉಪಾಧ್ಯಕ್ಷರೇ, ಹೇಳುತ್ತಿರತಕ್ಕ ವಿಚಾರ ಎಷ್ಟೊಂದು ಸತ್ಯಕ್ಕೆ ದೂರವಾಗಿದೆ ಎಂಬುದನ್ನು ಹೇಳುತ್ತೇನೆ. ಪೋಲೀಸ್ ಕಮೀಷನರ್ ರವರ ಗಮನಕ್ಕೆ ಬಂದ ತಕ್ಷಣವೇ ಅಲ್ಲಿರತಕ್ಕ ಬಡವರು ಎತ್ತಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಅಂತ ಹೇಳಿ ನಾನು ಎಲ್ಲೋ ದೂರದಲ್ಲಿದ್ದೆ. ವೈರ್‌ಲೆಸ್ ಕಾಂಟಾಕ್ಟ್ ಮಾಡಿ ಅಲ್ಲಿರತಕ್ಕ ಪೂರ್ ಟೆನೆಂಟ್ ಅಲ್ಲೇ ಇರಬೇಕು ಎಂದು ಹೇಳಿ ಕ್ರಮ ತೆಗೆದುಕೊಂಡಿದ್ದೇವೆ. ಅದು ಆದ ನಂತರ ಇವರು ಹೋಗಿರತಕ್ಕಂತಹದ್ದು. ಆದರ ಬಗ್ಗೆ ಒಂದು ಅಪ್ರೀಸಿಯೇಷನ್ ಬೇರೆ ಬೇಡವೇ ನಮಗೆ ? ನೀವು ಕ್ರೆಡಿಟ್ ತೆಗೆದುಕೊಳ್ಳಿ.

(ಗೊಂದಲ)

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ:- ಪೋಲೀಸ್ ಕಮೀಷನರ್‌ರವರಿಗೆ ನಾನು ಶ್ಲಾಘನೆ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- We have taken steps to protect the poor.

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ:- ನಾನು ಶ್ಲಾಘನೆ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಗಮನಕ್ಕೆ ತನ್ನಿ. ಆದರೆ ಸತ್ಯಕ್ಕೆ ಹತ್ತಿರವಾಗಿರಬೇಕು.

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ:- ಅವರ ಗಮನಕ್ಕೆ ತಂದ ತಕ್ಷಣ ಅವರು ಮಾಡಿದ್ದಾರೆ ಎಂದು ಹೇಳಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಇದು ಏನಾಗುತ್ತದೆ ಎಂದರೆ, ಎಕ್ಸೈಸ್ ಕಂಟ್ರಾಕ್ಟದಾರ ಯಾರೋ ಒಬ್ಬ ಎಕ್ಸೈಸ್ ಕಂಟ್ರಾಕ್ಟದಾರರಿಗೆ ಅವರ ಪಕ್ಕದಲ್ಲಿರತಕ್ಕ ಜಮೀನಿಗೆ ಪ್ರೊಟೆಕ್ಟ್ ಮಾಡುವುದಕ್ಕೆ ಈ ಸರ್ಕಾರಕ್ಕೆ, ಇವರಿಗೆ ಎಂದು ಹೇಳಿ ನೀವು ಹೇಳಿಕೊಂಡು ಕುಳಿತುಕೊಂಡರೆ ನಾವು ಏನು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಹೇಳಿದರಲ್ಲಾ ಈಗ ಎಕ್ಸೈಸ್ ಕಂಟ್ರಾಕ್ಟದಾರ್ ಎಂದು. We have taken immediate steps. We have done it immediately.

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ:- ಎಲ್ಲಿ ಹೇಳಿದ್ದೇವೆ ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಹೌದ್ರಿ. ಎಕ್ಸೈಸ್ ಕಂಟ್ರಾಕ್ಟರ್‌ದಾರರು ಈ ತರಹ ಮಾಡುತ್ತಾ ಇದ್ದಾನೆ ಎಂದು ಹೇಳಿದರು. ಗೃಹ ಮಂತ್ರಿಗಳು ಒಪ್ಪಿಕೊಂಡರು. ಪೋಲೀಸ್ ಅಧಿಕಾರಿಗಳು ಹೋಗಿದ್ದಾರೆ ಕ್ರಮ ತೆಗೆದುಕಿಂಡಿದ್ದಾರೆ ಎಂದು. ಹಾಗಾದರೆ ಆ ವ್ಯಕ್ತಿ ಎಕ್ಸೈಸ್ ಕಂಟ್ರಾಕ್ಟರೋ ಅಥವಾ ಬೇರೆಯವರೋ ಅವರ ಹೆಸರು ಹೇಳಿ. ನಿಮಗೆ ಪೋಲೀಸ್ ಇಲಾಖೆ ಇದೆ. ಈ ಸರ್ಕಾರ ನೀವು ನಡೆಸುತ್ತಿದ್ದೀರಿ. ಹಾಗಾದರೆ ಅಲ್ಲಿ ನಡೆದಿರುವುದು ನಿಜ ಎಂಬುದನ್ನು ಒಪ್ಪಿಕೊಳ್ಳುತ್ತೀರಿ ತಾನೇ ? ಅಂದರೆ ಶ್ರೀಮಂತರು ಬಡವರನ್ನು ಒಕ್ಕಲೆಬ್ಬಿಸುತ್ತಿದ್ದಾರೆ. ಇದನ್ನು ನೀವು ಒಪ್ಪಿಕೊಳ್ಳಿ. ನಿಮ್ಮ ಸರ್ಕಾರದಲ್ಲಿ ಬಡವರಿಗೆ ಸ್ಥಾನ ಇಲ್ಲ. ಅವರು ಬೀದಿ ಪಾಲಗುತ್ತಿದ್ದಾರೆ. ಇದನ್ನು ಒಪ್ಪಿಕೊಳ್ಳಿ.

ಶ್ರೀ ಹೆಚ್.ಡಿ.ದೇವೇಗೌಡ:- ವಿರೋಧ ಪಕ್ಷದ ನಾಯಕರಿಗೆ ಬಡವರ ಗುತ್ತಿಗೆ ಕೊಟ್ಟಿದ್ದೇವೆ. ನಾವೆಲ್ಲಾ ಶ್ರೀಮಂತರ ಗುತ್ತಿಗೆ ತೆಗೆದುಕೊಂಡಿದ್ದೇವೆ. ನೀವೂ ಹೇಳಿ. ನಾವೂ ಹೇಳುತ್ತೇವೆ. ಜನ ತೀರ್ಮಾನ ಮಾಡುತ್ತಾರೆ.

ಶ್ರೀನಿವಾಸ್ :- ಮಾನ್ಯ ಉಪಾಧ್ಯಕ್ಷರೇ ಒಂದು ನಿಮಿಷ ಆ ಭಾಹದ ಶಾಸಕನಾಹಿ

ಎರಡು ಮಾತನ್ನು ಹೇಳುತ್ತೇನೆ. ರಾಜಕೀಯ ಮಾಡುವುದು ಬೇಡ. ನಮಗೆ ರಾಜಕೀಯ ಮಾಡುವುದಕ್ಕೆ ಬರುವುದಿಲ್ಲ. ಅಲ್ಲಿನ ರಾಷ್ಟ್ರೀಯ ಕ್ರೀಡಾ ರಂಗಕ್ಕೆ....

ಉಪಾಧ್ಯಕ್ಷರು:- ಇಲ್ಲಿಗೆ ಮುಗಿಸೋಣ. ಸಾಕಷ್ಟು ಚರ್ಚೆಯಾಗಿದೆ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:- ಆ ಕ್ಷೇತ್ರದ ಶಾಸಕನಾಗಿ ನಾನು ಹೇಳುತ್ತಾ ಇದ್ದೇನೆ. ಅವರಿಗೆ ನಗು ಬರಬಹುದು. ಅದರ ಬಗ್ಗೆ ಮಾತನಾಡುವುದಿಲ್ಲ. ರಾಜಕೀಯ ಮಾತನಾಡುವುದಿಲ್ಲ. ಅಲ್ಲಿ ಏನಾಗಿದೆ ಎಂದರೆ ಇದು ನಗುವ ಪ್ರಶ್ನೆ ಇಲ್ಲ. ದುಡ್ಡು ಬರುತ್ತದೆ ಎಂದು ಬೆಂಕಿ ಹಚ್ಚಿಸಿಕೊಳ್ಳುವುದು ಅಷ್ಟು ಸಲೀಸ್ ಅಲ್ಲ. ಆ ರೀತಿ ಯಾರೂ ಬೆಂಕಿ ಹಚ್ಚಿಕೊಳ್ಳುವುದಿಲ್ಲ. ಇವತ್ತು ಯಾರಾದರೂ ಬೆಂಕಿ ಹಚ್ಚಿಸಿಕೊಳ್ಳಲಿ. ದುಡ್ಡು ಕೊಡುತ್ತೇವೆ ಎಂದು. ಅದೆಲ್ಲ ಮಾತು. ಇದು ತಮಾಷೆ ಮಾತಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಹೋಗೋಣ ಸ್ಥಳಕ್ಕೆ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ:- ಬೆಂಕಿ ಹಚ್ಚಿದ್ದಾರೆ ಎಂದೆಲ್ಲಾ ಹೇಳುತ್ತಿದ್ದಾರೆ. ಇದನ್ನೆಲ್ಲಾ ಅಲೋ ಮಾಡುತ್ತೀರಾ ?

ಉಪಾಧ್ಯಕ್ಷರು :- ದಯಮಾಡಿ ಕುಳಿತುಕೊಳ್ಳಿ. ಬಹಳ ಸಮಯವಾಗಿದೆ.

ಶ್ರೀ ಎಂ.ಶ್ರೀನಿವಾಸ್:- ದಯವಿಟ್ಟು ಮುಗಿಸುತ್ತೇನೆ. ಒಂದು ಮಾತನ್ನು ಹೇಳುತ್ತೇನೆ. ಆ ಕಷ್ಟ ನನಗೆ ಗೊತ್ತು. ಇವರು ಏನು ಹೇಳಿದರು. ಯಾವುದೇ ಕ್ರೀಡಾಂಗಣ, ಯಾವುದೇ ಕಂಟ್ರಾಕ್ಟರಿಗೆ ಸಪೋರ್ಟ್ ಮಾಡುವುದಿಲ್ಲ ಎನ್ನುವ ಮಾತನ್ನು ಹೇಳಿದರು. ಇವತ್ತು ಅಲ್ಲಿ 394 ಸ್ಲಮ್ ಇವೆ. ಒಳಗಡೆ ರಾಷ್ಟ್ರೀಯ ಕ್ರೀಡಾ ರಂಗದ ಪಕ್ಕದಲ್ಲಿ ಅಡ್ಜಾಯಿನ್ನಾಗಿ ಇದೆ.....

(ಗೊಂದಲ)

ಉಪಾಧ್ಯಕ್ಷರು:- ಈ ಸಂಜೆ ಹೋಗುವುದಕ್ಕೆ ಅವರು ತಯಾರಿದ್ದಾರಲ್ಲಾ. ಸುಮ್ಮನೆ ಏಕೆ ಹೀಗೆ ಮಾಡುತ್ತೀರಿ ?

ಶ್ರೀ ಬಿ.ಎಸ್.ಯಡಿಯೂರಪ್ಪ :- ಹೂ, ಆನ್ನಿರಿ.

ಶ್ರೀ ಎಂ.ಶ್ರೀನಿವಾಸ:- ಆಗಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ :- ನಡೆಯಿರಿ ಹೋಗೋಣ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:- ದಯವಿಟ್ಟು ಒಂದು ನಿಮಿಷ ಹೇಳಿ ಮುಗಿಸಿಬಿಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು:- ಅವರು ಹೋಗುವುದಕ್ಕೆ ತಯಾರಿದ್ದೇವೆ ಎಂದು ಹೇಳಿದರೂ ಪುನ: ಅದರಲ್ಲಿ ಚರ್ಚೆ ಮಾಡುವುದು ಏನು ?

ಶ್ರೀ ಎಂ.ಶ್ರೀನಿವಾಸ್:- ಸ್ವಾಮಿ ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಈ ರೀತಿಯ ಕಷ್ಟ ಆದರೆ ಗೊತ್ತಾಗುತ್ತದೆ. 394 ಗುಡಿಸಲು ಅಲ್ಲಿ ಇವೆ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್ :- ಇಲ್ಲದಿದ್ದರೆ ನಾನು ವಾಕ್ ಔಟ್ ಮಾಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ನನ್ನದೊಂದು ಕ್ರಿಯಾ ಲೋಪ ಇದೆ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್ :- ಇಲ್ಲದಿದ್ದರೆ ನಾನು ವಾಕ್ ಔಟ್ ಮಾಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- I am on a Point of Order.

ಉಪಾಧ್ಯಕ್ಷರು:- ಮಾನ್ಯ ಗೃಹ ಮಂತ್ರಿಗಳು ಕ್ರಿಯಾ ಲೋಪ ಎತ್ತಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಸನ್ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಸದಸ್ಯರಾಗಿರತಕ್ಕಂತಹ ಶ್ರೀನಿವಾಸ್‌ರವರು 3 ದಿನಗಳ ಹಿಂದೆ ನಡೆದಿರತಕ್ಕ ಬೆಂಕಿ ಘಟನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆಗಿರತಕ್ಕ ಎಲ್ಲಾ ವಿಚಾರಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ವತ: ಉತ್ತರ ಕೊಟ್ಟಿದ್ದಾರೆ. ಅಲ್ಲಿಗೆ ಮುಗಿಯುತ್ತದೆ ಆ ವಿಚಾರ. ಶೂನ್ಯ ವೇಳೆಯಲ್ಲಿ ಇನ್ಯಾವುದೋ 350, ಇನ್ಯಾವುದೋ 450 ಮನೆಗಳನ್ನು ಸುಟ್ಟಿರುವ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಲ್ಲಿ ತಾವು ಅವರಿಗೆ ಅವಕಾಶ ಕೊಟ್ಟಿದ್ದೀರೋ ?

ಉಪಾಧ್ಯಕ್ಷರು :- ಇಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ :- ತಮ್ಮನ್ನು ನಾನು ಕೇಳುತ್ತಿದ್ದೇನೆ. ಆದ್ದರಿಂದ ಎಲ್ಲವನ್ನೂ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಿಯಮಾವಳಿಗಳು ಇವೆ ಈ ಸಭೆಯಲ್ಲಿ. ಇವರು ಎಲ್ಲವನ್ನೂ ಇಲ್ಲಿ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಶ್ರೀನಿವಾಸ:- ಇಲ್ಲ, ಸದನದ ಸಮಿತಿ ಮಾಡಿ.

ಶ್ರೀ ಸಿ.ಬೈರೇಗೌಡ:- ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿರತಕ್ಕ ಗೌರವಾನ್ವಿತ ಸದಸ್ಯರೊಡನೆ ಸ್ಥಳಕ್ಕೆ ಪರಿಶೀಲನೆ ಮಾಡೋಣ ಎನ್ನುವ ಮಾತನ್ನು ಸಹ ಹೇಳಿದ್ದಾರೆ. ಅದರ ಮೇಲೆ ಏನು ಚರ್ಚೆ ಈಗ ?

ಶ್ರೀ ಬಿ.ಎಸ್.ಯಡಿಯೂರಪ್ಪ :- ಈಗ ಗೃಹ ಮಂತ್ರಿಗಳು ಜವಾಬಾಧರಿ ಸ್ಥಾನದಿಂದ ಒಂದು ಮಾತನ್ನು ಹೇಳಿದ್ದಾರೆ. ಆಲ್ಲಿಂದ ಒಂದು ಕಿಲೋಮೀಟರ್ ದೂರ ಇದೆ ಎಂದು. ಶ್ರೀನಿವಾಸ್ ಅವರು ಹೇಳಿದರು ನಾನು ಸ್ಥಳ ನೋಡಿಕೊಂಡು ಬಂದಿದ್ದೇನೆ, ಮೇನ್ ರೋಡಿನಿಂದ ಪಕ್ಕದಲ್ಲೇ ಇರುವಂಥ ಸ್ಥಳ ಎಂದು; ಇದು ನಂಬರ್ ಒನ್. ನಂಬರ್ ಟು, ಪಕ್ಕದಲ್ಲಿ ಎಲ್ಲಿ ಕಟ್ಟುತ್ತಿದ್ದಾರೆ ಅಲ್ಲೇ 390 ಗುಡಿಸಲುಗಳಿವೆ, ಬೇರೆ ಆಲ್ಟರ್ನೇಟ್ ವ್ಯವಸ್ಥೆ ಮಾಡುತ್ತಿಲ್ಲ; ಬಿಲ್ಡಿಂಗ್ ಕಟ್ಟುತ್ತಲೇ ಇದ್ದಾರೆ. ಸಭಾನಾಯಕರು ಹೇಳಿದಂತೆ ಎಲ್ಲಾ ವಿರೋಧ ಪಕ್ಷದ ಮುಖಂಡರು ಅಲ್ಲಿಗೆ ಹೋಗೋಣ; ಸ್ಪಾಟ್ ನೋಡಿಕೊಂಡು ಬಂದು ಸತ್ಯ ಸಂಗತಿಯನ್ನು ನೋಡಿ ಸಭಾನಾಯಕರು ಏನು ಹೇಳುತ್ತಾರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧರಿದ್ದೇವೆ ಸ್ವಾಮಿ, ಆಗಬಹುದು.

ಉಪಾಧ್ಯಕ್ಷರು :- ಸಮಯ ನಿಗದಿ ಮಾಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಯಾವಾಗ ಮಾಡುತ್ತೀರಿ ?

ಶ್ರೀ ಸಿ.ಬೈರೇಗೌಡ:- ಅಧ್ಯಕ್ಷರು ಸಮಯ ನಿಗದಿ ಮಾಡುತ್ತೇನೆ ಎಂದು ಹೇಳಿದ ಮೇಲೆ ಪುನ: ತಮ್ಮದೇನಿದೆ ? ಅವರು ಹೇಳಲಿಲ್ಲವೇ ಸಮಯ ನಿಗದಿ ಮಾಡೋಣ ಎಂದು.

ಶ್ರೀ ಬಿ.ಎಸ್.ಯಡಿಯೂರಪ್ಪ :- ಅದೇನು ಹೇಳುತ್ತೀರಿ ಹೇಳಿ ಸ್ವಾಮಿ.

ಶ್ರೀ ಸಿ.ಬೈರೇಗೌಡ :- ನಾನಲ್ಲ ಹೇಳಬೇಕಾಗಿರುವುದು. ಅಧ್ಯಕ್ಷರು ಏನು ಹೇಳುತ್ತಾರೆ ಕೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಯಾವಾಗ ನಿಗದಿ ಮಾಡುತ್ತೀರಿ ಸ್ವಾಮಿ ?

ಉಪಾಧ್ಯಕ್ಷರು :- ಸಮಯ ನಿಗದಿ ಮಾಡೋಣ ಎಂದು ಹೇಳಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಇವತ್ತು ಮಾಡುತ್ತೀರಾ? ಈಗ ಹೊರಡೋಣ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು :- ಹೀಗೇ ಮಾಡಿ ಎಂದು ಹೇಳಬೇಡಿ. ಸಮಯ ನಿಗದಿ ಮಾಡುತ್ತೇನೆ ಎಂದು ಹೇಳಿದ್ದೇನಿ. ಹೋಗಬೇಕು ಎಂದು ನಿರ್ಣಯ ಆಯಿತು. ಸಮಯ ತಿಳಿಸುತ್ತೇವೆ.

. **ಶ್ರೀ ಬಿ.ಎಸ್.ಯಡಿಯೂರಪ್ಪ :-** ಆಗಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಉಪಾಧ್ಯಕ್ಷರೇ, ಈಗಾಗಲೇ ನಾವು ಮತ್ತು ಮಾನ್ಯ ಪಾಟಾಳ್ ನಾಗರಾಜ್ ಅವರು ಅಧ್ಯಕ್ಷರ ಕೊಠಡಿಯಲ್ಲಿ ಅವರನ್ನು ಕೇಳಿಕೊಂಡಿದ್ದೇವೆ. ದಿನಾಂಕ 21-3-1995ರ ಮಧ್ಯಾಹ್ನ.....

ಉಪಾಧ್ಯಕ್ಷರು :- ಗೃಹ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರಲ್ಲಾ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಮಧ್ಯಾಹ್ನ ಏನು ಹುಬ್ಬಳ್ಳಿಯಲ್ಲಿ....

ಶ್ರೀ ಬಿ.ಎಸ್.ಯಡಿಯೂರಪ್ಪ :- ಹುಬ್ಬಳ್ಳಿ ಬಗ್ಗೆ ನಾನೂ ಕೊಟ್ಟಿದ್ದೇನೆ; ಮಾತನಾಡುತ್ತೇನೆ ಎಂದು ಅಷ್ಟೆ.

ಶ್ರೀ ಪಿ.ಜಿ.ಆರ್.ಸಿಂಧ್ಯ :- ಹುಬ್ಬಳ್ಳಿ ವಿಚಾರದಲ್ಲಿ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಏನು ಅಲ್ಲಿ ಗಲಭೆ ಆಗಿತ್ತು ಅದರ ಬಗ್ಗೆ ಇಲ್ಲಿ ನಾವು ಒಂದು ನಿಲುವಳಿ ಸೂಚನೆಯನ್ನು ತಂದಿದ್ದೆವು. ತಂದಾಗ ಮಾನ್ಯ ಮುಖ್ಯ ಮಂತ್ರಿಗಳು ಕೆಲವು ವಿಷಯಗಳನ್ನು ಇಲ್ಲಿ ಆ ಸಂದರ್ಭದಲ್ಲಿ ಅವರ ಹತ್ತಿರ ಏನು ಮಾಹಿತಿ ಇತ್ತು ಅಷ್ಟು ಪ್ರಸ್ತಾಪನೆ ಮಾಡಿ ಅದರ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟರು. ತದನಂತರ ಶ್ರೀಮಾನ್ ಸಿಂಧ್ಯಾಜಿಯವರು ಹುಬ್ಬಳ್ಳಿಗೆ ಹೋಗಿದ್ದಾರೆ, ಬಂದಮೇಲೆ ಸವಿಸ್ತಾರವಾದ ಒಂದು ವರದಿಯನ್ನು ನಾನು ಕೊಡಿಸುತ್ತೇನೆ ಎಂದು ಹೇಳಿದ್ದರು. ಬಹುಶ: ಅಲ್ಲಿ ಮೇಲ್ಮನೆಯಲ್ಲಿ ಮಾಡುವುದಕ್ಕಿಂತ ಮುಂಚೆ ಇಲ್ಲಿ ಅವರು ಏನು ಹೇಳಿ ಹೋಗಿದ್ದರು ಅದರಂತೆ ಇಲ್ಲಿ ಮಾಡಬಹುದಾಗಿತ್ತು. ಆದರೆ ನಿನ್ನೆ ಅಲ್ಲಿ ಮಾಡಿದ್ದಾರೆ. ನನ್ನದಿಷ್ಟೆ ಮನವಿ. ಏನೆಂದರೆ ಯಾವ ಸದನದಲ್ಲಿ ಈ ವಿಷಯ ಮೊದಲು ಪ್ರಸ್ತಾಪಕ್ಕೆ ಬರುತ್ತದೆ ಅಲ್ಲಿ ಮತ್ತು ತಾವೇ ಇಲ್ಲಿ ನಾನು ಹೇಳಿಕೆಯನ್ನು ಮಾಡಿಸುತ್ತೇನೆ ಎಂದು ಹೇಳಿದ್ದೀರಿ ಇಲ್ಲಿ ಸಂಪ್ರದಾಯದ ಪ್ರಕಾರ

ಮೊದಲು ಮಾಡಿಸಬೇಕಾಗಿತ್ತು ಎಂಬುದು ಒಂದು. ಎರಡನೆಯದು, ಅವರು ಹೋದಮೇಲೂ ಕೂಡ ಗಲಾಟೆ ಕಂಟಿನ್ಯೂ ಆಗಿದೆ. ಅದೇ ರೀತಿಯಾಗಿ ಅವರು ಹೋದ ಮೇಲೆ ಕೂಡ ಪುನ: ಇಬ್ಬರೂ ಸತ್ತಿದ್ದಾರೆ. ಪುನ: ಅದೇ ರೀತಿಯಾಗಿ ಗಲಾಟೆ ನಡೆದಿದೆ. ಇವತ್ತೂ ಕೂಡ ಅಲ್ಲಿ ಗಲಾಟೆಯಾಗಿದೆ ಮತ್ತು ಚಾಕು ಚೂರಿಯಿಂದ ಇರಿತ ಮಾಡಿದ್ದಾರೆಂದು ಕೂಡ ಬಂದಿದೆ. ಈ ಪರಿಸ್ಥಿತಿ ಇರುವಾಗ ಅಲ್ಲಿನ ಸಿಚ್ಯುಯೇಷನ್ ಇನ್ನೂ ಕೂಡ ಕಂಟ್ರೋಲ್‌ನಲ್ಲಿ ಬಂದಿಲ್ಲ, ಸಿಚ್ಯುಯೇಷನ್ ಟೆನ್ಸ್ ಇದೆ ಎನ್ನತಕ್ಕ ವರದಿಗಳೇ ನಮಗೆ ಇವತ್ತು ಬರುತ್ತಿವೆ. ಅದಕ್ಕೆ ಕಾರಣ ಏನು ? ಮತ್ತು ನಾವು ಪತ್ರಿಕೆಯಲ್ಲಿ ಕೂಡ ನೋಡಿದ್ದೇವೆ. ಮಹಾರಾಷ್ಟ್ರದಿಂದ ಕೆಲವು ಪ್ಲಟೂನ್ ತರಿಸಿಕೊಂಡಿದ್ದಾರೆ. ಮತ್ತು ಕೇರಳದಿಂದಲೂ ಕೂಡ ಕೆಲವು ಕಡೆ ತರಿಸಿಕೊಂಡಿದ್ದಾರೆ ಎನ್ನತಕ್ಕದ್ದು ಕೂಡ ನಮಗೆ ಗೊತ್ತಾಗಿದೆ. ಆದರೆ ಅವರ ಹೇಳಿಕೆಯಲ್ಲಿ ನಾನು ನೋಡಲಿಲ್ಲ, ಅವರು ಮೇಲ್ನನೆಯಲ್ಲಿ ಏನು ಹೇಳಿದ್ದಾರೆ ಅದರಲ್ಲಿ ಈ ಮಾಹಿತಿಗಳು ಇಲ್ಲ. ಅಂದರೆ ಯಾವ ರೀತಿಯಾಗಿ ಬಂಧೋಬಸ್ತ್ ಮಾಡಿದ್ದಾರೆ, ಎಲ್ಲಿ ಯಾವ ರೀತಿಯಾಗಿ ಕಂಟ್ರೋಲ್‌ಗೆ ಬಂದಿವೆ ಎಂಬ ಬಗ್ಗೆ ಏನೂ ಕೂಡ ಸ್ಪಷ್ಟವಾಗಿ ಅಲ್ಲಿನ ಹೇಳಿಕೆಯಲ್ಲೂ ಕೂಡ ಇಲ್ಲ. ಅದಕ್ಕಾಗಿ ಅಲ್ಲಿ ಹೇಳಿದ್ದೇನೆ; ಪುನ: ಇಲ್ಲಿ ಪ್ರಸ್ತಾಪ ಮಾಡುತ್ತೀರೋ ? ಈಗ ಸದ್ಯಕ್ಕಿರತಕ್ಕ ಪರಿಸ್ಥಿತಿಯನ್ನು ತಾವು ಹೇಳುತ್ತೀರೋ ಎಂಬುದು ಬಹಳ ಮುಖ್ಯ. ಮತ್ತು ಏನೇನು ಬಂದೋಬಸ್ತ್ ಮಾಡಿದ್ದೀರಿ ? ಮಹಾರಾಷ್ಟ್ರದಿಂದ ಎಷ್ಟು ಪೋಲೀಸ್ ಬಂತು ? ಕೇರಳದಿಂದ ಎಷ್ಟು ಬಂತು ? ಎಷ್ಟು ಜನ ಇವತ್ತು ಸತ್ತಿದ್ದಾರೆ ? ವರದಿ ಪ್ರಕಾರ ಕೇವಲ 24 ಜನ ಎಂದು ಮಾತ್ರ ಇದೆ.

ಉಪಾಧ್ಯಕ್ಷರು:- ಸ್ಟೇಟ್‌ಮೆಂಟ್ ಕೇಳಿದ ಮೇಲೆ ಇವೆಲ್ಲಾ ಕ್ಲಾರಿಫಿಕೇಷನ್ ಕೇಳಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಅದಕ್ಕಾಗಿ ಸ್ಪಷ್ಟವಾಗಿ ಎಷ್ಟು ಜನ ಇವತ್ತಿನ ದಿವಸ ಗಾಯಗೊಂಡಿದ್ದಾರೆ ಎನ್ನತಕ್ಕದ್ದರ ಬಗ್ಗೆ ಕೂಡ ಒಂದು ಸವಿಸ್ತಾರವಾದ ಸ್ಟೇಟ್‌ಮೆಂಟ್ ತಾವು ದಯವಿಟ್ಟು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಒಂದು ನಿಮಷ ಹೋಮ್ ಮಿನಿಸ್ಟರ್‌ಗೆ ಹೇಳಬೇಕಾಗಿದೆ. ಅಶೋಕ್ ಕಾಟ್ವೆ ಎನ್ನುವ ಶಾಸಕರ ಮನೆಯ ಮೇಲೆ ಮಾರಕಾಸ್ತ್ರಗಳನ್ನು ತೆಗೆದುಕೊಂಡು ಹೋಗಿ ಹಲ್ಲೆ ಮಾಡಿದಂಥ ಘಟನೆ ನಡೆದಿದೆ. ಅಶೋಕ್ ಕಾಟ್ವೆ, ಶಾಸಕರು, ಅವರ ಮನೆಯ ಮೇಲೆ ನಿನ್ನೆ ರಾತ್ರಿ ಹಲ್ಲೆ ಆಗಿದೆ. ಇನ್ನೂ ಅನೇಕ ಘಟನೆಗಳು ನಡೆದಿರುವುದನ್ನು ತಮ್ಮ ಗಮನಕ್ಕೆ ತಂದರೆ ತಾವು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಉಪಾಧ್ಯಕ್ಷರು :- ನಿಮಗೆಲ್ಲರಿಗೂ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಏನಾಗಿದೆ ಎಂದು ಹೇಳಿದರೆ ಉತ್ತರ

ಹೇಳುವುದಕ್ಕೆ ಅನುಕೂಲವಾಗುತ್ತದೆ. ಮುಂಚೇನೇ ಹೇಗೆ ಉತ್ತರ ಕೊಡುತ್ತಾರೆ?

ಉಪಾದ್ಯಕ್ಷರು :- ಇಲ್ಲ, ಅವರು ಹೇಳಿದ ಮೇಲೆ ನೀವು ಕೇಳಬಹುದಲ್ಲ. ಸ್ಟೇಟ್‌ಮೆಂಟ್ ಅವರು ಮಾಡಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಹೋಮ್ ಮಿನಿಸ್ಟರ್‌ಗೆ ಇವತ್ತು ಏನು ಬೆಳವಣಿಗೆಯಾಗಿದೆ....

ಶ್ರೀ ಪಿ.ಜಿ.ಆರ್.ಸಿಂಧ್ಯ :- ನಾನು ಉತ್ತರ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಒಂದು ನಿಮಿಷ, ಗೃಹ ಸಚಿವರೇ,...

ಉಪಾಧ್ಯಕ್ಷರು :- ಅಲ್ಲ, ನಿಮಗೆ ಅವಕಾಶ ಮಾಡಿಕೊಡುತ್ತೇನೆ. ನಂತರ ನೀವು ಕೇಳಬಹುದು.

ಶ್ರೀ ವಾಟಾಳ್ ನಾಗರಾಜ್ :- ಕೇಳುತ್ತೇನೆ ಸ್ವಾಮಿ.

ಉಪಾಧ್ಯಕ್ಷರು :- ನಿಮಗೆ ಬೇಕಾದಂಥ ಎಲ್ಲಾ ವಿಷಗಳನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಒಂದೇನಾಯಿತು ಎಂದು ಹೇಳಿದರೆ, ನಾವು ಮತ್ತು ಖಿರ್ಗೆಯವರು ಬೆಳಿಗ್ಗೆ ತಮ್ಮ ಕಾರ್ಯಾಲಯಕ್ಕೆ ಬಂದು ಮಾತನಾಡಿ ಈ ಬಗ್ಗೆ ಸುದೀರ್ಘವಾದ ಒಂದು ಹೇಳಿಕೆ ಕೊಡಬೇಕು ಎನ್ನತಕ್ಕದ್ದು ಒಂದು ನಿರ್ಧಾರ, ಎರಡನೆಯದು ಈ ಸದನದಲ್ಲಿ ಮುಖ್ಯ ಮಂತ್ರಿಗಳು ಏನು ಹೇಳಿದರು ಅವತ್ತೇ ನಾನು ಗೃಹ ಸಚಿವರನ್ನು ಹುಬ್ಬಳ್ಳಿಗೆ ಕಳುಹಿಸಿದ್ದೇನೆ, ಅವರು ಬಂದ ನಂಸತರ ಹೇಳಿಕೆ ಕೊಡಿಸುತ್ತೇನೆ ಎಂದು ಹೇಳಿ ಆಗಲೇ ಮೂರು ದಿನ ಆಯಿತು. ಮಾನ್ಯ ಗೃಹ ಸಚಿವರು ಇವತ್ತು ಹೇಳಿಕೆ ಕೊಡುವುದಕ್ಕೆ ಬಂದಿದ್ದಾರೆ ನಮ್ಮ ಸದನಕ್ಕೆ. ಸ್ವಲ್ಪ ಹೆಚ್ಚು ಕಡಿಮೆ ಅವರು ಹಕ್ಕು ಚ್ಯುತಿ ಮಾಡಿದಂತಾಗುತ್ತದೇನೋ ಈ ಸದನಕ್ಕೆ. ತಮ್ಮ ಮೂಲಕ ನಾನು ಹೇಳುತ್ತಿದ್ದೇನೆ, ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ವಿಧಾನ ಪರಿಷತ್ತಿನಲ್ಲಿ ಹೇಳಿಕೆ ಕೊಟ್ಟರುವುದೆಲ್ಲಾ ಬಂದು ಬಿಟ್ಟಿದೆ ಈಗ. ತಮಗೆ ನಾನು ತಿಳಿಸತಕ್ಕದ್ದು, ಇದು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ, ಹಕ್ಕುಚ್ಯುತಿ ಅವರ ಮೇಲೆ ತರಬೇಕು ಎನ್ನುವ ಉದ್ದೇಶ ನನಗಿಲ್ಲ.

ಉಪಾಧ್ಯಕ್ಷರು :- ನಾಗರಾಜ್ ಅವರೇ, ಎರಡು ದಿವಸ ಏನು ನಡೆಯಿತು ಎಂಬುದು ನಿಮಗೂ ಗೊತ್ತಿದೆ. ಇವತ್ತು ಅವರು ಸ್ಟೇಟ್‌ಮೆಂಟ್ ಮಾಡಲಿ. ಮಾಡಿದ ನಂತರ ತಮಗೆ ಏನು ಕ್ಲಾರಿಫಿಕೇಷನ್ ಬೇಕೋ ಅದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಅದನ್ನೇ ಕೇಳುತ್ತೇವೆ ಸ್ವಾಮಿ. ತಮಗೆ ನಾನು

ಹೇಳುವುದ ತಡವಾಗಿ ಅವರು ಉತ್ತರ ಕೊಡುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಗೃಹ ಸಚಿವರು ಬಂದ ನಂತರ ಕೂಡಲೇ ಹೇಳಿಕೆ ಕೊಡಿಸುತ್ತೇನೆ ಎಂದು ಭರವಸೆಯನ್ನು ಈ ಸದನಕ್ಕೆ ಕೊಟ್ಟಿದ್ದರು. ನಾವು ತಮ್ಮನ್ನು ಏತಕ್ಕೆ ಕೇಳುತ್ತಿದ್ದೇವೆ ಎಂದರೆ ಇಷ್ಟು ನಿಧಾನ ಆದಮೇಲೆ ಅಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿರುವಾಗ ಮಾನ್ಯ ಗೃಹ ಸಚಿವರು ಮೂರು ದಿನ ಆದಮೇಲೆ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೆ. ಈ ಸದನವನ್ನು ಮೊದಲೇ ವಿಶ್ವಾಸಕ್ಕೆ ತೆಗೆದುಕೊಂಡು ಕೂಡಲೇ ಬಂದು ಅವರು ಹೇಳಿಕೆ ಮಾಡಬೇಕಾಗಿತ್ತು. ಹುಬ್ಬಳ್ಳಿಯಿಂದ ಬಂದ ನಂತರ ತಕ್ಷಣವೇ ಅವರು ಈ ಸದನಕ್ಕೆ ಹೇಳಿ ನಾನು ಒಂದು ಹೇಳಿಕೆ ಕೊಡುತ್ತಿದ್ದೇನೆ, ದಯಮಾಡಿ ಇದನ್ನು ಸ್ವೀಕರಿಸಬೇಕು ಎಂದು ತಮಗೆ ಹೇಳಬೇಕಾಗಿತ್ತು ಸ್ವಾಮಿ. ಅದೇನೂ ಹೇಳಲಿಲ್ಲ. ನಮ್ಮ ಒಂದು ಒತ್ತಾಯದ ಮೇಲೆ ಅವರು ಇವತ್ತು ಹೇಳಿಕೆ ಕೊಡುವುದಕ್ಕೆ ಬಂದಿದ್ದಾರೆ. ಅವರೇ ನೇರವಾಗಿ ಹೇಳಿಕೆ ಕೊಡಬೇಕಾಗಿತ್ತು. ಆದ್ದರಿಂದ ತಮಗೆ ನಾನು ಏನು ಹೇಳುತ್ತಿದ್ದೇನೆ ಅಂದರೆ ಇಲ್ಲಿ ಗೃಹ ಸಚಿವರಿದ್ದಾರೆ. ಅಲ್ಲಿ ಇನ್ನೂ ಗಂಭೀರವಾದ ಪರಿಸ್ಥಿತಿ ಇದೆ. 144ನೇ ಸೆಕ್ಷನ್ ಇದೆ. ಶಾಂತವಾಗದೇ ಇರುವ ಪರಿಸ್ಥಿತಿ ಇರುವಾಗ ಮಾನ್ಯ ಗೃಹ ಸಚಿವರು ಇಷ್ಟು ನಿಧಾನವಾಗಿ ಈ ಸದನಕ್ಕೆ ಮಾಹಿತಿಯನ್ನು ಕೊಡತಕ್ಕದ್ದು ಸರಿಯಿಲ್ಲ ಎನ್ನುವ ಮಾತನ್ನು ತಮಗೆ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು :- ಅವರು ಸ್ಟೇಟ್‌ಮೆಂಟ್ ಮಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಈಗ ತಾನೇ ನನಗೆ ಬಂದಿರುವ ಸುದ್ದಿ ಪ್ರಕಾರ ನಿನ್ನೆ ರಾತ್ರಿ ಬಿ.ಜೆ.ಪಿ. ಶಾಸಕರಾದ ಶ್ರೀ ಅಶೋಕ್ ಕಾಟ್ಟೆ ಅವರ ಮನೆಯ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದಾರೆ. ಇಲ್ಲಿಯವರೆಗೆ ಸುಮಾರು 35 ಜನ ಗಾಯಾಳುಗಳು ಕೆ.ಎಂ.ಸಿ. ಆಸ್ಪತ್ರೆಯಲ್ಲಿದ್ದಾರೆ. ಬಹಳ ಪ್ರಮುಖವಾದಂಥ ಕ್ಷೇತ್ರ; ಇಲ್ಲಿ ಆಗಾಗ ಗಲಭೆಗಳಾಗುತ್ತಿರುತ್ತದೆ. ಆ ರೀತಿ ಪ್ರದೇಶಗಳಾದ ಕಮರೀಪೇಟೆ, ಕಂಚುಗಾರರ ಓಣಿ, ಗಣೇಶ್ ಪೇಟೆ, ಬೆಳಗಾಂ ಗಲ್ಲಿ, ಮೇದಾರ್ ಓಣಿ, ಮರಾಠಾ ಗಲ್ಲಿ, ಬ್ಯಾಡಿ ಓಣಿ, ಅರಳೇಕಟ್ಟೆ ಓಣಿ, ಹಂಸಾರ ವಟ್ಟಾ, ಚನ್ನಪೇಟೆ, ಹಳೇ ಹುಬ್ಬಳ್ಳಿ ರಸ್ತೆ ಇಲ್ಲಿ ಯಾವುದೇ ಪೋಲೀಸ್ ಬಂದೋಬಸ್ತ್ ಮಾಡಿಲ್ಲ. ಅಂದರೆ ನಿರಂತರವಾಗಿ ಕಳೆದ ಮೂರು ನಾಲ್ಕು ದಿವಸಗಳಿಂದ ಘಲಬೆಗಳು ನಡೆಯತ್ತಿವೆ. ನಾನು ಹೋಮ್ ಮಿನಿಸ್ಟರ್ ಹತ್ತಿರ ಪರ್ಸನಲ್ಲಾಗಿ ಮಾತನಾಡಿದ್ದೇನೆ. ಮುಖ್ಯ ಮಂತ್ರಿಗಳ ಹತ್ತಿರವೂ ಬೆಳಿಗ್ಗೆ ನಾನು ದೂರವಾಣಿಯಲ್ಲಿ ಮಾತನಾಡಿದ್ದೇನೆ. ಎರಡು ಸಂಗತಿ ನಾನು ತಮ್ಮಲ್ಲಿ ವಿನಂತಿ ಮಾಡುವುದು. ಇಲ್ಲಿ ಏನಾದರೂ ಮಾಡಿ ಶಾಂತ ಪರಿಸ್ಥಿತಿಯನ್ನು ತರಬೇಕಾಗಿದೆ. ಅಲ್ಲಿ ಸೂಕ್ತವಾದಂಥ ಪೋಲೀಸ್ ಬಂದೋಬಸ್ತ್ ಎಲ್ಲಿ ಈ ರೀತಿಯಾದ ಸೂಕ್ಷ್ಮವಾದ ಪ್ರದೇಶ ಇರುತ್ತದೋ ಅಲ್ಲಿ ಹಾಕಬೇಕಾಗಿತ್ತು. ನಾನು ಹೇಳುತ್ತಿಲ್ಲ. ಹೋಮ್ ಮಿನಿಸ್ಟರ್ ಹೋಗಿ ಬಂದಿದ್ದಾರೆ. ಅಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ನೋಡಿದರೆ, ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ ಅದನ್ನು ಹೇಳಿ. ಅದಕ್ಕಿಂತ ಬಹಳ ಪ್ರಮುಖವಾಗಿರತಕ್ಕದ್ದು ಸನ್ಮಾನ್ಯ ಅಧ್ಯಕ್ಷರೇ, ಈ ರೀತಿ ಘಟನೆಗಳನು ನಿರಂತರವಾಗಿ ನಡೆಯುತ್ತಿವೆ. ಆವತ್ತು ಒಂದು ದಿನ ಪ್ರಾರಂಭವಾಯಿತು ಯಡಿಯೂರಪ್ಪನವರೇ, ಚೂರಿ ಹಾಕಿದರು